ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 14 ಏಪ್ರಿಲ್ 4, 1982 ಬೆಲೆ 60 ಪೈಸೆ

ನಾಗರಕೊಯಿಲ್ ದುರ್ಘಟನೆಗೆ

ಆರ್. ಎಸ್. ಎಸ್. ಕಾರಣ

ಕಳೆದ ಮಾರ್ಚಿ ತಿಂಗಳ ಮೊದಲವಾರದಲ್ಲಿ ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲಾ ಕೇಂದ್ರವಾದ ನಾಗರಕೊಯಿಲ್ ಪ್ರದೇಶದಲ್ಲಿ ನಡೆದ ಅಮಾನುಷ ಮತೀಯ ಗಲಭೆಗಳಿಗೆ ಹಿಂದೂ ಕೋಮುವಾದಿ ಸಂಘಟನೆಯಾದ ಆರ್. ಎಸ್. ಎಸ್. ಕಾರಣವೆಂದು ತಿಳಿದುಬಂದಿದೆ.

ಸುಮಾರು 10 ಲಕ್ಷ ಜನಸಂಖ್ಯೆ ಇರುವ ಕನ್ಯಾಕುಮಾರಿ ಜಿಲ್ಲೆಯಲ್ಲಿ ಹಿಂದೂ ಮತ್ತು ಕ್ರಿಶ್ಚಿಯನ್‌ರು ಸಮಸಂಖ್ಯೆಯಲ್ಲಿದ್ದಾರೆ. ಜಿಲ್ಲೆಯಾದ್ಯಂತ ಹೇರಳ ದೇವಸ್ಥಾನಗಳೂ, ಚರ್ಚ್‌ಗಳೂ ಇವೆ. ಆರ್.ಎಸ್.ಎಸ್. ಈ ಪ್ರದೇಶದಲ್ಲಿ ಚಟುವಟಿಕೆ ಆರಂಭಿಸುವ ಮೊದಲು ಹಿಂದೂ, ಕ್ರಿಶ್ಚಿಯನ್ ಸಮುದಾಯಗಳ ನಡುವೆ ಆತ್ಮೀಯ ಬಾಂಧವ್ಯವಿತ್ತು.

ಈ ಬಾಂಧವ್ಯ ಬಿರಕು ಬಿಟ್ಟದ್ದು 8ನೇಅಕ್ಟೋಬರ್ 81ರಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಕುಲಶೇಖರಂ ಎಂಬಲ್ಲಿ ರಸ್ತೆ ಪ್ರದರ್ಶನ ಮಾಡಿದಂದಿನಿಂದ. ಆಗಿನಿಂದ ಜಿಲ್ಲೆಯಾದ್ಯಂತ ಆರ್.ಎಸ್.ಎಸ್. ಚುರುಕಾಗಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯಾದ್ಯಂತ 110 RSS ಶಾಖೆ (ವಿಷವೃಕ್ಷ) ಗಳು ಹರಡಿವೆ. ಈ RSS ಮುಂದಾಳುಗಳು ಬಹಿರಂಗ ಸಭೆಗಳನ್ನೇರ್ಪಡಿಸಿ ಪ್ರಚೋದನಕಾರಿ ಪರಿಸ್ಥಿತಿಯನ್ನುಂಟುಮಾಡಿದ್ದರು.

ಕಳೆದ ಫೆಬ್ರವರಿ 13 ಮತ್ತು 14ರಂದು ನಾಗರ್‌ಕೋಯಿಲ್‌ನಲ್ಲಿ ಹಿಂದೂಗಳ ಐಕ್ಯತೆ ಮತ್ತು ಜಾಗೃತಿಗಾಗಿ ಸಮ್ಮೇಳನವೊಂದನ್ನು RSS ಮತ್ತು ವಿಶ್ವ ಹಿಂದೂ ಪರಿಷತ್‌ನವರು ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ಅತ್ಯಂತ ಹೇಯ ಭಾಷೆಯನ್ನು ಬಳಸಲಾಯಿತು. ಕ್ರಿಶ್ಚಿಯನ್‌ರ ವಿರುದ್ಧ, ಕಮ್ಯುನಿಸ್ಟರ ವಿರುದ್ಧ ಬೆಂಕಿ ಕಾರಲಾಯಿತು.

ಈ ಸಮ್ಮೇಳನದ ನಾಲ್ಕೇ ದಿನಗಳ ನಂತರ ಸಾರಿಗೆ ದಟ್ಟಣೆ ಇರುವ ಸ್ಥಳ (ಮಂಡಿ ಮಾರ್ಕೆಟ್) ವೊಂದರಲ್ಲಿ ಗಣೇಶನ ವಿಗ್ರಹ ಸ್ಥಾಪನೆಯ ನಾಟಕ ನಡೆಯಿತು. ಸಾರ್ವಜನಿಕ ಸ್ಥಳವೊಂದರ ದುರುಪಯೋಗ ಮಾಡಿದ್ದಕ್ಕಾಗಿ ಸ್ವಾಭಾವಿಕವಾಗಿಯೇ ಕ್ರಿಶ್ಚಿಯನ್ ಕೋಮಿನವರು ಪ್ರತಿಭಟಿಸಿದರು. ನಂತರ ಹೈವೇ ಡಿಪಾರ್ಟ್‌ಮೆಂಟಿನವರು, ಸಬ್-ಕಲೆಕ್ಟರ್ ಮೊದಲಾದವರೆಲ್ಲ ಬಂದು ವಿಗ್ರಹವನ್ನು ತೆಗೆಯಲು ಸಲಹೆ ಮಾಡಿದರು.

ಈ ಘಟನೆಯನ್ನೇ ವಿರೂಪಗೊಳಿಸಿ ಕ್ರಿಶ್ಚಿಯನ್ ಕೋಮಿನವರ ಮೇಲೆ ದಾಳಿಮಾಡುವ ಹಂಚಿಕೆ ಮಾಡಲಾಯಿತು. ಕ್ರಿಶ್ಚಿಯನ್ನರು ಗಣೇಶ ವಿಗ್ರಹವನ್ನು ಕದ್ದಿರುವರೆಂಬ ಅಪಾದನೆ ಹೊರಿಸಿದ್ದ ಭಿತ್ತಿಪತ್ರಗಳು ಪ್ರದೇಶದಲ್ಲಿ ಕಂಡು ಬಂದವು.

ಮಂಡೈಕಾಡು ಎಂಬುದು ನಾಗರ್ ಕೋಯಿಲ್ ನಿಂದ 21 ಕಿ.ಮಿ. ದೂರದಲ್ಲಿರುವ ಮತ್ತು ಗಣೇಶ ವಿಗ್ರಹ ಘಟನೆನಡೆದತಿಂಗಲ್‌ಚಾಂಡೈನಿಂದ5ಕಿ. ಮಿ. ದೂರದಲ್ಲಿರುವ ಕರಾವಳಿ ತೀರದ ಹಳ್ಳಿ. ಇಲ್ಲಿಂದ ಅರ್ಧ ಕಿ. ಮಿ. ದೂರದಲ್ಲಿ ಭಗವತೀ ಅಮ್ಮನ ದೇವಸ್ಥಾನವಿದೆ. ಕರಾವಳಿ ತೀರದಲ್ಲಿ ಕ್ರಿಶ್ಚಿಯನ್ನರ ಚರ್ಚೊಂದಿದೆ. ಮಂಡೈಕಾಡಿನ ನಿವಾಸಿಗಳೆಲ್ಲ ಕ್ರಿಶ್ಚಿಯನ್ ಮೀನುಗಾರರು. ಭಗವತೀ ಅಮ್ಮನವರ ದೇವಸ್ಥಾನಕ್ಕೆ ಭೇಟಿ ನೀಡುವವರೆಲ್ಲ ಸಮುದ್ರದಲ್ಲಿ ಸ್ನಾನ ಕೈಗೊಂಡು ಬರುವಾಗ ಚರ್ಚಿಗೂ ಭೇಟಿ ನೀಡುವ ಸಂಪ್ರದಾಯ ಇಲ್ಲಿಯವರೆಗೂ ಬಂದಿತ್ತು.

ಈ ವರ್ಷ ಫೆಬ್ರವರಿ 28 ರಿಂದ ಮಾರ್ಚ್ 9ರವರೆಗೆ ಭಗವತೀ ಅಮ್ಮನವರ ದೇವಸ್ಥಾನದಲ್ಲಿ ಜಾತ್ರೆ ನಡೆಯಿತು. ಈ ಸಂಧರ್ಭವೇ ಮತೀಯ ಬಾಂಧವ್ಯ ಹದಗೆಡಲು ಕಾರಣವಾಯಿತು. ಪ್ರಚೋದನಕಾರಿ ವಾತಾವರಣ ಉಂಟಾಗಿ ಪೋಲೀಸರು ಗುಂಡು ಹಾರಿಸಿದ್ದರಿಂದ 6 ಜನ ಮೀನುಗಾರರು ಮರಣ ಹೊಂದಿ ಸುಮಾರು 15 ಜನ ಗಾಯಗೊಂಡರು. ಮಾರ್ಚ್ 7 ರಂದು ಸಂತ್ರಸ್ತ ಕ್ರಿಶ್ಚಿಯನ್, ಮುಸ್ಲಿಂ ಸಮುದಾಯದವರು ಹೊರಡಿಸಿದ ಶಾಂತಿ ಮೆರವಣಿಗೆಯ ಮೇಲೆ ಕಲ್ಲು ತೂರಲಾಯಿತು. ಮಾರ್ಚ್ 12 ರಂದು ನಾಗರ್‌ಕೊಯಿಲ್ ನಿಂದ 10ಕಿ.ಮಿ.ದೂರದಲ್ಲಿರುವ ಏಥಾಮೋಳಿ(Eethamozhi)ಎಂಬಲ್ಲಿ ಮೀನುಗಾರರು ಮೀನು ಮಾರಲು ಬಂದಾಗ ಮತ್ತೆ ಗಲಭೆಯಾಯಿತು. ಅಂಗಡಿ ವಗೈರೆ ಲೂಟಿ ಮಾಡಲಾಯಿತು. ಮರುದಿನ ಸ್ಥಳಕ್ಕೆ ಭೇಟಿ ನೀಡಿದ ಪತ್ರಕರ್ತರಿಗೆ ಲಾಠೀ, ಚೈನುಗಳಿಂದ ಸನ್ನದ್ಧರಾದ

(8ನೇ ಪುಟವನ್ನು ನೋಡಿ)

ಸಂಪಾದಕೀಯ

'ಕಾಂಗ್ರೈಗೆ ಮುಖ ಭಂಗ'

ಲಂಡನ್ನಿನಿಂದ ವಾಪಸಾದೊಡನೆಯೇ ಕೆಲವು ಮುಖ್ಯ ಬೆಳವಣಿಗೆಗಳು ಶ್ರೀಮತಿ ಇಂದಿರಾ ಗಾಂಧಿ ಮತ್ತು ಅವರ ಕಾಂಗ್ರೆಸ್ ಪಕ್ಷಕ್ಕೆ ಮುಖ ಭಂಗವನ್ನುಂಟುಮಾಡಿವೆ. ಪಶ್ಚಿಮ ಬಂಗಾಲದಲ್ಲಿ ಚುನಾವಣೆ ನಡೆಸುವ ಬಗ್ಗೆ ರಾಷ್ಟ್ರದ ಅತ್ಯುಚ್ಛ ನ್ಯಾಯಾಲಯವು ಏನು ತೀರ್ಪು ಕೊಡುವುದೋ ಎಂದು ದೇಶದ ಪ್ರಜಾಪ್ರಭುತ್ವ ಶಕ್ತಿಗಳೂ, ಜನ ವಿಭಾಗಗಳೂ ಕಾತರದಿಂದ ವೀಕ್ಷಿಸುತ್ತಿದ್ದರು. ಜನಬೆಂಬಲವನ್ನೂ, ನೈತಿಕತೆಯನ್ನೂ ಸಂಪೂರ್ಣವಾಗಿ ಕಳೆದುಕೊಂಡಿರುವ ಪಶ್ಚಿಮ ಬಂಗಾಲದ ಕಾಂಗ್ರೈಯು ಎಂತಾದರೂ ಚುನಾವಣೆಯನ್ನು ನಡೆಯದಂತೆ ಮಾಡುವುದರ ಮೂಲಕ ಅಥವಾ ಚುನಾವಣೆಯನ್ನು ಮುಂದೂಡುವುದರ ಮೂಲಕ ಅಧ್ಯಕ್ಷರ ಆಡಳಿತವು ಜಾರಿಗೆ ಬರುವಂತೆ ಮಾಡಲು ಶತ ಪ್ರಯತ್ನಗಳನ್ನು ನಡೆಸಿತು. ಬೇರೆಲ್ಲಾ ತಂತ್ರಗಳೂ ಫಲಕಾರಿಯಾಗದಿದ್ದಾಗ ಮತದಾರರ ಪಟ್ಟಿ ತಯಾರಿಸುವುದರಲ್ಲಿ ಮೋಸ ನಡೆದಿದೆ ಎಂಬ ಸುಳ್ಳು ಆರೋಪದೊಂದಿಗೆ ನ್ಯಾಯಾಲಯಕ್ಕೆ ಹೋಯಿತು. ಪಶ್ಚಿಮ ಬಂಗಾಳದ ಕಲ್ಕತ್ತಾ ಹೈಕೋರ್ಟು ಮತದಾರರ ಪಟ್ಟಿಯನ್ನು ಪ್ರಕಟಿಸುವುದನ್ನೂ, ಚುನಾವಣೆ ನಡೆಸುವ ಸಿದ್ಧತೆಗಳಿಗೂ ತಡೆಯಾಜ್ಞೆ ಕೊಟ್ಟಿತು.

ಇದೀಗ ಸರ್ವೋಚ್ಛ ನ್ಯಾಯಾಲಯವು ಕಲ್ಕತ್ತಾ ಹೈಕೋರ್ಟಿನ ಆಜ್ಞೆಯು ಸರಿಯಲ್ಲವೆಂದು ತೀರ್ಪಿತ್ತು, ಅದನ್ನು ತಳ್ಳಿಹಾಕಿದೆ. ಮತದಾರರ ಪಟ್ಟಿಯನ್ನು ಪ್ರಕಟಿಸಿ, ಚುನಾವಣೆ ನಡೆಸಲು ಶ್ರಮ ವಹಿಸಲು ಆದೇಶಿಸಿದೆ. ಈಗಾಗಲೇ ಪಶ್ಚಿಮ ಬಂಗಾಲದಲ್ಲಿ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ನ್ಯಾಯಾಂಗದ ಮೇಲೂ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಸರಕಾರದಿಂದ ಧಾಳಿಯು ಹೆಚ್ಚುತ್ತಿರುವ ಸಂದರ್ಭದಲ್ಲಿ ದೇಶದ ಸರ್ವೋಚ್ಛ ನ್ಯಾಯಾಲಯವು ಕೊಟ್ಟಿರುವ ತೀರ್ಪು ಚರಿತ್ರಾರ್ಹವಾಗಿದೆ. ಪ್ರಜಾಪ್ರಭುತ್ವ ಶಕ್ತಿಗಳಿಗೆ ಇದೊಂದು ದೊಡ್ಡ ಜಯ! ನ್ಯಾಯಾಂಗದ ಘನತೆಯನ್ನೂ ಹೆಚ್ಚಿಸುವಂತಿದೆ ಈ ತೀರ್ಪು. ಕಲ್ಕತ್ತಾ ಹೈಕೋರ್ಟಿನ ನ್ಯಾಯಾಧೀಶ ಸಬ್ಯಸಾಚಿ ಮುಖರ್ಜಿಯವರು ತೀರ್ಪು ಕೊಟ್ಟಿರುವುದು ಸರಿಇಲ್ಲವೆಂದು ಸಾರಿರುವ ಸುಪ್ರೀಂ ಕೋರ್ಟಿನ ಬೆಂಚ್, ಈ ಹಿಂದೆ ಕಾಂಗ್ರೈಯ ಪರವಾಗಿ ವಾದಿಸಿರುವ ಪ್ರಮುಖ ನ್ಯಾಯವಾದಿಗಳು ಅನುಸರಿಸಿರುವ ಕೆಟ್ಟ ವರ್ತನೆಯನ್ನು ಖಂಡಿಸಿ, ಅವರುಗಳು ಕ್ಷಮೆಯಾಚಿಸುವಂತೆ ಮಾಡಿರುವುದನ್ನೂ ಸ್ಮರಿಸಿಕೊಳ್ಳಬೇಕು.

ಪಶ್ಚಿಮ ಬಂಗಾಲಕ್ಕೆ ಸಂಬಂಧಿಸಿದ ಬೆಳವಣಿಗೆಗೆ ಇಂದಿರಾ ಗಾಂಧಿ ಮತ್ತು ಅವರ ಪಕ್ಷಕ್ಕೆ ದೊಡ್ಡ ಅಘಾತವನ್ನುಂಟುಮಾಡಿರುವುದರೊಂದಿಗೆ, ಆಂಧ್ರ ಪ್ರದೇಶದಲ್ಲಿನ ರಾಜಕೀಯ ಬೆಳವಣಿಗೆಗಳು, ಪಕ್ಷದೊಳಗಿನ ಅಶಿಸ್ತು ಮತ್ತು ಗುಂಪುಗಾರಿಕೆಗಳು-ಇವೆಲ್ಲಾ ತಲೆ ಬಿಸಿಯನ್ನು ಹೆಚ್ಚಿಸಿವೆ. ಕೇವಲ ಕೌಟುಂಬಿಕ ಸಮಸ್ಯೆಯೆಂದೇ ಬಣ್ಣಿಸಲು ಕೆಲವರು ಪ್ರಯತ್ನಿಸಬಹುದಾದರೂ, ಇಂದಿರಾ ಗಾಂಧಿ ಮತ್ತು ಅವರ ಸೊಸೆ ಮೇನಕಾ ಗಾಂಧಿಯವರೊಳಗಿನ ವಿರಸವು ಇದೀಗ ಮೇನಕಾ ಗಾಂಧಿಯನ್ನು ಬಲಾತ್ಕಾರವಾಗಿ ಮನೆಯಿಂದ ಹೊರದಬ್ಬುವುದರಲ್ಲಿ ಅವಸಾನಗೊಂಡಿರುವ ಘಟನೆಯು ಇಂದಿರಾ ಗಾಂಧಿ ಮತ್ತು ಕಾಂಗ್ರೈಗೆ ಮತ್ತೊಂದು ಆಘಾತವಾಗಿದೆ. ತನ್ನ ವಂಶದ ಆಡಳಿತವನ್ನು ಶಾಶ್ವತವಾಗಿ ಬಯಸುವ ಇಂದಿರಾ ಗಾಂಧಿ ಅವರ ಯೋಜನೆಗಳಿಗೂ, ಸಂಜಯ ಗಾಂಧಿಯ ಪತ್ನಿಯಾಗಿದ್ದ ತನಗೆ ರಾಜಕೀಯ ಪ್ರವೇಶದ ಹಕ್ಕಿದೆ ಎಂದು ನಂಬಿಕೊಂಡಿದ್ದ ಮೇನಕಾ ಗಾಂಧಿಯವರ ಆಶಯಗಳಿಗೂ, ತಿಕ್ಕಾಟವಾಗಿ, ಇದೀಗ ಅತ್ತೆ-ಸೊಸೆಯರ ಭಿನ್ನಾಭಿಪ್ರಾಯಗಳು ಆಸ್ಫೋಟಗೊಂಡಿವೆ. ಈ ಘಟನೆಯಿಂದ ತಕ್ಷಣ ಇಂದಿರಾ ಕಾಂಗ್ರೆಸ್ಸಿನ ಮೇಲೆ ಅಷ್ಟೇನೂ ಪರಿಣಾಮವಾಗದಿರಬಹುದು. ಆದರೆ ವಂಶ ಮತ್ತು ಕೌಟುಂಬಿಕ ಸಮಸ್ಯೆಗಳ ಹಿನ್ನೆಲೆಯ ರಾಜಕೀಯವನ್ನು ಅರ್ಥಮಾಡಿದಾಗ, ಸಧ್ಯದ ಬೆಳವಣಿಗೆಗೆ ಮುಂದೆ ಕುತೂಹಲಕಾರಿ ಪರಿಣಾಮಗಳನ್ನುಂಟುಮಾಡಬಹುದು. ಹತ್ತಾರು ವಿಷಯಗಳು ಬೆಳಕಿಗೆ ಬರಲೂ ಬಹುದು. ಅದೇನಿದ್ದರೂ, ಒಟ್ಟು ಬೆಳವಣಿಗೆಗಳು ಇಂದಿರಾ ಗಾಂಧಿ ಮತ್ತವರ ಪಕ್ಷಕ್ಕೆ ತಲೆ ಬಿಸಿ ಉಂಟುಮಾಡಿವೆ ವನ್ನುವುದು ಸತ್ಯದ ಮಾತು.

ಮಾರ್ಚಿ 28 ರಂದು ಡಿ. ವೈ. ಎಫ್. ಐ. ನೇತೃತ್ವದಲ್ಲಿ

ಬೀದರ್‌ನಿಂದ ಬೆಂಗಳೂರಿನವರೆಗೆ ಸೈಕಲ್ ಜಾಥಾ

ಮಾರ್ಚಿ 28 ರಂದು ಅಖಿಲಭಾರತ ಡಿ. ವೈ. ಎಫ್. ಐ. ಕರೆಯ ಮೇರೆಗೆ ರಾಷ್ಟ್ರದಾದ್ಯಂತ ನಿರುದ್ಯೋಗ ವಿರುಧಿ ದಿನಾಚರಣೆಯನ್ನು ಆಚರಿಸಲಾಯಿತು. ಕರ್ನಾಟಕ ಡಿ. ವೈ. ಎಫ್. ಐ. ರಾಜ್ಯ ಸಮಿತಿಯು ಈ ಕಾರ್ಯಕ್ರಮದ ಅಂಗವಾಗಿ ರಾಜ್ಯದ ಮೂಲೆ ಮೂಲೆಗಳಿಂದ ರಾಜಧಾನಿ (ಬೆಂಗಳೂರು) ಗೆ ಸೈಕಲ್ ಜಾಥಾ ವ್ಯವಸ್ಥೆ ಮಾಡಿತ್ತು.

1982 ನ್ನು ಉತ್ಪಾದನಾ ವರ್ಷವೆಂದು ಪ್ರಧಾನಿ ಘೋಷಿಸಿದ್ದಾರೆ. ಎಲ್ಲಾ ರಂಗಗಳಲ್ಲೂ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಕರೆ ನೀಡಿದ್ದಾರೆ. ಇದೊಂದು ವಿಪರ್ಯಾಸವೇ ಸರಿ. ಯಾಕೆಂದರೆ ದೇಶದ ಅತಿ ಹೆಚ್ಚಿನ ಉತ್ಪಾದನಾ ಶಕ್ತಿಯು ನಿರುಪಯುಕ್ತವಾಗಿದೆ. ಜನಸಂಖ್ಯೆಯ 66% ಭಾಗ ಯಾವುದೇ ರೀತಿಯಲ್ಲಿ ಉತ್ಪಾದನಾ ಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲವೆಂದು ಮತ್ತು 176 ಲಕ್ಷ ನಿರುದ್ಯೋಗಿಗಳು ಇದ್ದಾರೆಂದು ಮಾ. 13, 1982 ರಂದು ಸರ್ಕಾರವೇ ಹೊರಡಿಸಿರುವ ವರದಿ ತಿಳಿಸುತ್ತದೆ.

ಬಲ್ಲ ಮೂಲಗಳಿಂದ ಬಂದಿರುವ ವರದಿಗಳ ಪ್ರಕಾರ ನಮ್ಮ ದೇಶದಲ್ಲಿ ಐದೂವರೆ ಕೋಟಿ ಜನ ವಿದ್ಯಾವಂತ ಮತ್ತು ಅವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆಂದು ತಿಳಿದುಬಂದಿದೆ. ಇಂತಹ ಭೀಕರ ಸಮಸ್ಯೆಯ ಬಗ್ಗೆ ಆಳುವ ವರ್ಗಗಳು ಮತ್ತು ಅದರ ನೇತಾರರು ತಪ್ಪು ಮಾಹಿತಿಗಳನ್ನು ಕೊಟ್ಟು ಯುವಜನತೆಯನ್ನು ಮತ್ತು ಜನಸಾಮಾನ್ಯರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

ಯುವಜನತೆಯಲ್ಲಿ ನಿರುದ್ಯೋಗ ಸಮಸ್ಯೆಯ ಬಗ್ಗೆ ವಾಸ್ತವಿಕ ಪ್ರಜ್ಞೆ ಮೂಡಿಸಿ, ಸಮಸ್ಯೆಯ ವಿರುದ್ಧ ಯುವಜನತೆಯನ್ನು ಸಂಘಟಿಸಿ, ಹೋರಾಟಕ್ಕೆ ಅಣಿಗೊಳಿಸುವಂತೆ ಮಾಡುವ ದಿಶೆಯಲ್ಲಿ ಡಿ.ವೈ.ಎಫ್.ಐ. ರಾಜ್ಯ ಸಮಿತಿಯು ಏರ್ಪಡಿಸಿದ ಸೈಕಲ್ ಜಾಥಾ ಒಂದು ದಿಟ್ಟ ಪ್ರಯತ್ನವೇ ಸರಿ.

ಬೆಂಗಳೂರಿನಿಂದ ಸುಮಾರು 820 ಕಿ. ಮೀ, ದೂರದಲ್ಲಿರುವ 'ಬೀದರ್' ನಿಂದ ಮಾರ್ಚಿ 18 ರಂದು ಡಿ. ವೈ. ಎಫ್. ಐ. ಕಾರ್ಯಕರ್ತರ ತಂಡವೊಂದು ಬೆಂಗಳೂರಿನತ್ತ ಸೈಕಲ್ ಜಾಥಾ ಹೊರ

(8ನೇ ಪುಟವನ್ನು ನೋಡಿ)

"ನನ್ನ ಜೀವನದ ಕಥೆ" ಪುಸ್ತಕದ ಬಿಡುಗಡೆ

ಮಾರ್ಚ್ 22ರಂದು ದಿವಂಗತ ಕಾಂ। ಎ. ಕೆ. ಗೋಪಾಲನ್‌ರ 5ನೇ ವರ್ಧಂತಿಯನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು. ಬೆಂಗಳೂರಿನ ಯಶವಂತಪುರದ 'ಎ. ಕೆ. ಜಿ. ದಿನಾಚರಣೆ ಸಮಿತಿ'ಯ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದ ಅಂಗವಾಗಿ ದಿ.। ಕಾಂ। ಎ. ಕೆ. ಜಿ.ಯವರ ಆತ್ಮಚರಿತ್ರೆಯ ಕನ್ನಡ ಅನುವಾದ (ನನ್ನ ಜೀವನದ ಕಥೆ) ದ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಹಾಗೂ 'ವಿಜ್ಞಾನ ಮತ್ತು ಸಾಮ್ರಾಜ್ಯವಾದ' ಎಂಬ ವಿಷಯದ ಕುರಿತು ವಿಚಾರ ಸಂಕಿರಣವನ್ನೇರ್ಪಡಿಸಲಾಗಿತ್ತು.

ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟರಿಯೇಟ್ ಸದಸ್ಯ, ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ। ಪಿ. ರಾಮಚಂದ್ರರಾವ್ ವಹಿಸಿದ್ದರು.

ಆರಂಭದಲ್ಲಿ 'ಎ. ಕೆ. ಜಿ. ದಿನಾಚರಣೆ ಸಮಿತಿ'ಯ ಅಧ್ಯಕ್ಷ ಡಾ॥ ಪ್ರಕಾಶ್ ರಾವ್ ಸಭಿಕರನ್ನು ಸ್ವಾಗತಿಸಿದರು.

ಪುಸ್ತಕವನ್ನು ಬಿಡುಗಡೆ ಮಾಡಿದ ಡಾ॥ ಜಿ. ರಾಮಕೃಷ್ಣ ಅವರು ಮಾತನಾಡುತ್ತಾ ಈ ಪುಸ್ತಕ ಕರ್ನಾಟಕದ ಪುರೋಗಾಮಿ ಚಳುವಳಿಯನ್ನು ಮುನ್ನಡೆಸಲು ಸಹಾಯಕವಾಗಲೆಂದು ಹಾರೈಸಿದರು. ಡಾ॥ ಜಿ. ಆರ್. ಮುಂದುವರೆದು, ಶೋಷಕ ವ್ಯವಸ್ಥೆಯ ವಿರುದ್ಧ ಅವಿರತ ಹೋರಾಟ ನಡೆಸಿದ ಎ. ಕೆ. ಜಿ.ಯವರ ಹೋರಾಟದ ಬದುಕಿನ ಕುರಿತು ಪರಿಚಯ ನಾಡಿನ ಓದುಗರಿಗೆ ಲಭ್ಯವಾದದ್ದು ಅತ್ಯಂತ ಸಮರ್ಪಕ ಕೆಲಸ ಎಂದರು.

ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ। ಸೂರ್ಯನಾರಾಯಣರಾವ್ ಮಾತನಾಡುತ್ತ, ಎ. ಕೆ. ಜಿ.ಯವರ ಹೋರಾಟದ ಬದುಕಿನ ನಾನಾ ಮುಖಗಳನ್ನು ಜ್ಞಾಪಿಸಿದರು. ಎ. ಕೆ. ಜಿ.ಯವರನ್ನು ಕೇವಲ ನೆನೆಸಿಕೊಂಡರಷ್ಟೇ ಸಾಲದು, ಎ. ಕೆ. ಜಿ. ಜೀವನದುದ್ದಕ್ಕೂ ಹೋರಾಡಿದ ಧ್ಯೇಯಗಳನ್ನು ಸಾಕಾರಗೊಳಿಸಲು ಅವಿರತ ಪ್ರಯತ್ನ ನಡೆಸಬೇಕೆಂದರು.

ಕಾಂ। ಪಿ. ಆರ್. ಮಾತನಾಡುತ್ತಾ ಸಂಸತ್ತಿನ ಒಳಗೂ ಹೊರಗೂ ಜನತೆಗೋಸ್ಕರ ಹೋರಾಡಿದ ಧೀಮಂತ ಹೋರಾಟಗಾರ ಎ. ಕೆ. ಜಿ.ಯವರ ಬದುಕು ಪ್ರತಿಯೊಬ್ಬ ಕ್ರಾಂತಿಕಾರಿಗೂ ದಾರಿದೀಪ ಆ ದಾರಿಯಲ್ಲಿ ನಡೆಯುವುದು ಅತ್ಯವಶ್ಯ ಎಂದರು. ಕಾಂ। ಪಿ ಆರ್. ಮುಂದುವರೆದು, ಎ. ಕೆ. ಜಿ. ಯವರ ಆತ್ಮ ಚರಿತ್ರೆಯನ್ನು ಕನ್ನಡ ಜನತೆಗೆ ಓದಲು ಅನುವು ಮಾಡಿಕೊಟ್ಟ ಅನುವಾದಕ ಬಿ. ಮಾಧವ ಮತ್ತು ಮೈಸೂರಿನ ಭಾರತೀ ಪ್ರಕಾಶನದವರು ಅಭಿನಂದನೆಗೆ ಅರ್ಹರು ಎಂದರು.

ಕಾರ್ಯಕ್ರಮದ ಕೊನೆಯಲ್ಲಿ ಕೃಷ್ಣರಾಜಪುರದ ಕರ್ನಾಟಕ ಸಾಂಸ್ಕೃತಿಕ ತಂಡದವರು "ಬೆಲ್ಚಿ" ನಾಟಕವನ್ನು ಪ್ರದರ್ಶಿಸಿದರು.

ಮೈಸೂರು

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಾಯಕರಾಗಿದ್ದ ದಿ। ಕಾಂ। ಎ. ಕೆ. ಗೋಪಾಲನ್ (ಎ ಕೆ. ಜಿ.) ರವರ ಜೀವನ ಮತ್ತು ಹೋರಾಟವನ್ನು ಒಳಗೊಂಡ ಆತ್ಮಕಥೆ ಇದೇ ಮೊದಲ ಬಾರಿಗೆ ಕನ್ನಡದಲ್ಲಿ ಪ್ರಕಟಗೊಂಡಿದ್ದು, ಈ ಪುಸ್ತಕದಲ್ಲಿ ಸಾಹಿತ್ಯ ಮತ್ತು ಸಿದ್ಧಾಂತ ಸಹಜವಾಗಿಯೇ ಒಳಗೊಂಡಿದೆ ಎಂದು ಕನ್ನಡ ಖ್ಯಾತ ಬರಹಗಾರರಾದ ಹಾಗೂ ಕನ್ನಡ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾದ ಡಾ॥ ಹಾ. ಮಾ. ನಾಯಕರು ಅಭಿಪ್ರಾಯ ಪಟ್ಟಿರುತ್ತಾರೆ. 22-3-82 ರಂದು ಮೈಸೂರಿನ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಭಾರತೀ ಪ್ರಕಾಶನದವರು ಏರ್ಪಡಿಸಿದ್ದ ಎ. ಕೆ. ಜಿ. ಯವರ "ನನ್ನ ಜೀವನದ ಕಥೆ" (ಅನು : ಬಿ. ಮಾಧವ) ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಡಾ॥ ಹಾ. ಮಾ. ನಾ. ಮಾತನಾಡುತ್ತಿದ್ದರು. ಕನ್ನಡದಲ್ಲಿ ಎ.ಕೆ.ಜಿ. ಜೀವನ ಚರಿತ್ರೆ ಪ್ರಕಟವಾದ ಬಗ್ಗೆ ಸಂತೋಷ ವ್ಯಕ್ತಪಡಿಸಿದ ಅವರು ಎ. ಕೆ. ಜಿ. ಜೀವನ ಕಥೆ ಓದುವ ಮೂಲಕ ಕರ್ನಾಟಕದ ರಾಜಕೀಯ ಕ್ಷೇತ್ರ ಮುನ್ನಡೆಯಲಿ, ಶ್ರೀಮಂತಗೊಳ್ಳಲಿ ಎಂದು ಹಾರೈಸಿದರು. ಪುಸ್ತಕವನ್ನು ಅನುವಾದಿಸಿ ಕನ್ನಡಕ್ಕೆ ನೀಡಿದ ಶ್ರೀ ಬಿ. ಮಾಧವರನ್ನು, ಪ್ರಕಾಶನಗೊಳಿಸಿದ ಮೈಸೂರಿನ ಭಾರತೀ ಪ್ರಕಾಶನದವರನ್ನು ಹಾಗೂ ಸುಂದರವಾಗಿ ಮುದ್ರಿಸಿದ ರಾಮರಾಯರನ್ನು ಡಾ॥ ಹಾ.ಮ.ನಾ. ರವರು ಅಭಿನಂದಿಸಿದರು.

ಪೀಪಲ್ಸ್ ಬುಕ್ ಹೌಸಿನ ಶ್ರೀ ಡಿ. ಆರ್. ಕೃಷ್ಣಮೂರ್ತಿಯವರು ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಎ. ಕೆ. ಜಿ. ಯವರ ಜೀವನ ಚರಿತ್ರೆಯು ಕ್ರಾಂತಿಕಾರಿ ಹೋರಾಟಗಾರರ ಪಾಲಿನ ಆಯುಧವಾಗಬಲ್ಲದು ಎಂದು ಅಭಿಪ್ರಾಯಪಟ್ಟರು. ಎ. ಕೆ. ಜಿ. ಯವರು ನಡಸಿದ ಹಲವಾರು ಹೋರಾಟಗಳ ಬಗ್ಗೆ ವಿವರಣೆ ನೀಡಿದರು.

ಕನ್ನಡ ಅಧ್ಯಯನ ಸಂಸ್ಥೆಯ ರೀಡರ್ ಶ್ರೀ ಹೆಚ್. ಎಂ. ಚನ್ನಯ್ಯನವರು ಎ.ಕೆ.ಜಿ. ಜೀವನ ಕಥೆ ಗ್ರಂಥದ ಪರಿಚಯ ಮಾಡಿ ಮಾತನಾಡುತ್ತಾ ಎ. ಕೆ ಗೋಪಾಲನ್‌ರವರ ಜೀವನ ಕಥೆ ಮಾರ್ಕ್ಸ್‌ವಾದವನ್ನು ಹಾಗು ಸಾಹಿತ್ಯವನ್ನು ಸರಿಯಾದ ದೃಷ್ಟಿಯಲ್ಲಿ ಅರ್ಥೈಯಿಸಲು ನೆರವಾಗಿದೆ ಎಂದರು. ಶೋಷಣೆಗೊಳಗಾದ ಜನವರ್ಗದವರ ಬದುಕಿನೊಂದಿಗೆ ಒಂದಾಗಿ ಅವರೊಡನೆ ಉಂಡು, ಬಾಳಿ, ಅವರಿಗಾಗಿ ಹೋರಾಡಿದ ಎ. ಕೆ. ಗೋಪಾಲನ್ ಆ ಮೂಲಕ ಸಮಾಜವಾದವನ್ನು ಕಲಿತರು. ನಮ್ಮ ರಾಷ್ಟ್ರ ಸರಿಯಾದ ರೀತಿಯಲ್ಲಿ ನಡೆಯುವ ಬಗ್ಗೆ ಸ್ಪಷ್ಟ ಚಿಂತನೆ ಹೊಂದಿದ್ದ ಎ. ಕೆ. ಜಿ. ಯವರು ಭೂರ್ಜ್ವಾ ಪ್ರಜಾಪ್ರಭುತ್ವವನ್ನು ಬಯಲು ಪಡಿಸಿದ್ದರು..." ಎಂದು ಹೇಳಿದ ಚನ್ನಯ್ಯನವರು ಅಧಿಕಾರವು ಕೇಂದ್ರದಲ್ಲಿ ಕೇಂದ್ರೀಕರಣಗೊಂಡಿರುವವರೆಗೆ ರಾಜ್ಯ ಸರಕಾರಗಳಿಗೆ ತನ್ನ ತಿಳುವಳಿಕೆಯಲ್ಲಿರುವ ಉತ್ತಮ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲವೆಂದರು. ಹಾಗು ಈಗಿನ ನಮ್ಮ ದೇಶದ ಪ್ರಜಾಪ್ರಭುತ್ವ ಸುಳ್ಳು ಮತ್ತು ವಂಚನೆಗಳಿಂದ ಕೂಡಿದ್ದಾಗಿದೆ ಎಂದು ಅಭಿಪ್ರಾಯ ಪಟ್ಟರು. ದೇಶಕ್ಕೆ ಸ್ವಾತಂತ್ರ್ಯ ತರಲು ಹೋರಾಡಿದ ಎ ಕೆ.ಜಿ ಯವರು 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗಲೂ ಜೈಲಿನಲ್ಲೇ ಇದ್ದರು ಎಂದು ಹೇಳಿದ ಎಚ್. ಎಂ. ಚನ್ನಯ್ಯನವರು ಎ ಕೆ. ಜಿ. ಯವರ ಜೀವನದ ಹಲವಾರು ಅನುಭವಗಳನ್ನು ಸಭಿಕರಿಗೆ ವಿವರಿಸಿ "ಎ. ಕೆ. ಜಿ. ಜೀವನ ಕಥೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಉಪಯುಕ್ತ ಗ್ರಂಥವಾಗಿದ್ದು ಸಾಮಾಜಿಕ ಕಾರ್ಯಕರ್ತರ ಕೈಪಿಡಿಯಾಗಬಲ್ಲದು......" ಎಂದರು.

ಭಾರತೀ ಪ್ರಕಾಶನದ ಶ್ರೀ ನರಸಿಂಗ ರಾವ್‌ರವರು ಪುಸ್ತಕ ಬಿಡುಗಡೆಗೆ ನೆರವಾದ ಸರ್ವರನ್ನೂ ಅಭಿನಂದಿಸಿದರು. ರಾಜ್ಯದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕಾಂ॥ ಎಂ. ಕೆ. ಭಟ್‌ರವರು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದರು. ●

ಸಂತಾಪ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದ. ಕ. ಜಿಲ್ಲೆಯ ಮಂಗಳೂರು ತಾಲ್ಲೂಕಿನ ಗೋರಿಗುಡ್ಡೆ ಪ್ರದೇಶದ ಪಾರ್ಟಿ ಶಾಖಾ ಕಾರ್ಯದರ್ಶಿ ಕಾಂ। ಪುರುಷೋತ್ತಮರವರ ಪತ್ನಿ ಕಾಂ। ಯಮುನ ಅವರು 19-3-82 ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ.

ಕಾಂ। ಯಮುನ ಪಾರ್ಟಿಯ ಸಕ್ರೀಯ ಕಾರ್ಯಕರ್ತೆಯೂ, ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯೆಯೂ ಆಗಿದ್ದರು.

26-3-82 ರಂದು ಪಕ್ಷದ ಶಾಖಾ ಸಭೆ ನಡೆದು ಕಾಂ। ಯಮುನ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದೆ.

ಕಾಂ। ಯಮುನ ತಮ್ಮ ಪತಿ, ಐವರು ಪುತ್ರಿಯರು, ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಜಿ. ಆರ್. ಇಂಜನಿಯರಿಂಗ್ ಕಾರ್ಮಿಕರ

ವೇತನ ಒಪ್ಪಂದ

ಬೆಂಗಳೂರಿನ ವೈಟ್‌ಫೀಲ್ಡ್ ರಸ್ತೆಯಲ್ಲಿರುವ ಜಿ.ಆರ್. ಇಂಜಿನಿಯರಿಂಗ್ [ಸಿಐಟಿಯುಗೆ ಸಂಯೋಜಿತ] ಫ್ಯಾಕ್ಟರಿಯ ಕಾರ್ಮಿಕರ ವೇತನ ಕುರಿತು ಒಪ್ಪಂದವಾಗಿದೆ. ಅನೇಕ ಸುತ್ತಿನ ಮಾತುಕತೆಗಳ ನಂತರ 24-3-82 ರಂದು ಬೆಂಗಳೂರು 3ನೇ ವಿಭಾಗದ ಕಾರ್ಮಿಕ ಅಧಿಕಾರಿಗಳ ಸಮ್ಮುಖದಲ್ಲಿ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು. ಈ ಒಪ್ಪಂದ 1-1-82 ರಿಂದ ಜಾರಿಗೆ ಬರಲಿದೆ. ಒಪ್ಪಂದದ ಅವಧಿ 3 ವರ್ಷಗಳು.

ಒಪ್ಪಂದದ ಮುಖ್ಯಾಂಶಗಳು

1. ಒಪ್ಪಂದಕ್ಕೆ ಮೊದಲು ಪ್ರತಿ ಕಾರ್ಮಿಕನೂ 225 ರೂ. ಸಂಬಳ [ಒಟ್ಟು ಸೇರಿ] ಪಡೆಯುತ್ತಿದ್ದ. ಈಗ ಕನಿಷ್ಠ ಮೂಲ ವೇತನ 250 ರೂ. ಗಳು, ತುಟ್ಟಿಭತ್ಯ ಕನಿಷ್ಟ 185 ರೂ. ಗಳು ಹಾಗೂ ಸೂಚ್ಯಂಕ ಬೆಲೆ ಏರಿಕೆಗೆ 1 ರೂ 50 ಪೈಸೆಯಂತೆ ತುಟ್ಟಿಭತ್ತೆ ದೊರೆಯಲಿದೆ.

2. ಪ್ರತಿ ತಿಂಗಳು 50 ರೂ ಮನೆ ಬಾಡಿಗೆ ಭತ್ಯ ಮತ್ತು 50 ರೂ. ಸಾರಿಗೆ ಸೌಲಭ್ಯ.

3. ತಿಂಗಳಿಗೆ 40 ರೂ. ಕ್ಯಾಂಟೀನ್ ಸಬ್ಸಿಡಿ.

4. ಈ ವರ್ಷ [81-82] ಶೇಕಡ 20 ಬೋನಸ್.

5. ಹಿಂದೆ 3 ತಿಂಗಳ ಮುಷ್ಕರ ಕಾಲದಲ್ಲಿ ಸಸ್ಪೆಂಡ್ ಆಗಿದ್ದ ಕಾರ್ಮಿಕರಿಗೆ ಸರ್ವಿಸ್, ಹಿಂದಿನ ಬಾಕಿ ಸಂಬಳ ಸಮೇತ ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವಂತೆ ಒಪ್ಪಂದವಾಗಿದೆ.

ಹಿಂದೆ ನಡೆದ ಹೋರಾಟ ಸಂದರ್ಭದಲ್ಲೂ, ಮಾತುಕತೆ ನಡೆದ ಸಂದರ್ಭದಲ್ಲೂ ಅಪೂರ್ವ ಐಕ್ಯತೆ ಪ್ರದರ್ಶಿಸಿರುವ ಜಿ. ಆರ್. ಇಂಜಿನಿಯರಿಂಗ್‌ನ ಕಾರ್ಮಿಕರನ್ನು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ। ಟಿ ಎಸ್. ಅನಂತ ರಾಮ್ ಅಭಿನಂದಿಸಿದ್ದಾರೆ.

ಬೆಂಗಳೂರಿನಲ್ಲಿ

ಇಬ್ಬರು ಹೋಟೆಲ್ ಕಾರ್ಮಿಕರ ಬಲಿ

21-3-82 ರಂದು ಬೆಂಗಳೂರಿನ ಕಲಾಸಿಪಾಳ್ಯಂನಲ್ಲಿರುವ ಹೋಟಿಲ್ ನ್ಯೂ ತಾಜ್‌ನಲ್ಲಿ ಭಾವಿಯ ಪೈಪ್‌ನ ದುರಸ್ತಿ ಮಾಡಲು ಭಾವಿಗಿಳಿದ ಇಬ್ಬರು ಕಾರ್ಮಿಕರು ದುರ್ವಾಯುವಿನಿಂದಾಗಿ ಮೃತಪಟ್ಟ ದುರಂತ ಘಟನೆ ವರದಿಯಾಗಿದೆ. ಘಟನೆಯ ವಿವರ ಈ ರೀತಿ ಇದೆ :

ಹೋಟೆಲ್‌ಗೆ ನೀರನ್ನು ಪೂರೈಸುತ್ತಿದ್ದ ಭಾವಿಯ ಪೈಪು ಕೆಟ್ಟು ಹೋಗಿತ್ತು. ಹೋಟೆಲ್ ಮಾಲೀಕರು ಕೆಳಗಿಳಿದು ದುರಸ್ತು ಮಾಡಲು ಒಬ್ಬ ಕಾರ್ಮಿಕನಿಗೆ ಒತ್ತಾಯಪಡಿಸಿದರು. ಕೆಳಗಿಳಿದ ಆ ಕೆಲಸಗಾರ ಮೇಲೆ ಬರದೇ ಇದ್ದುದರಿಂದಾಗಿ ಇನ್ನೊಬ್ಬ ಕೆಲಸಗಾರನನ್ನು ಒತ್ತಾಯದಿಂದ ಇಳಿಸಲಾಯಿತು. ಅವನೂ ಮೇಲೆ ಬರಲಿಲ್ಲವಾದ್ದರಿಂದ ಮೂರನೇ ಕಾರ್ಮಿಕನಿಗೆ ಕೆಳಗಿಳಿಸಲಾಯಿತು. ಆದರೆ ಅವನಿಗೆ ವಿದ್ಯುತ್ ಷಾಕ್ ಹೊಡೆದದ್ದರಿಂದ ಅರ್ಧಕ್ಕೆ ಮೇಲೆ ಬಂದನು ಮೊದಲು ಕೆಳಗಿಳಿದವರಿಬ್ಬರೂ ಹೆಣವಾದರು.

ಮಾಲೀಕರು ಈ ದುರ್ಘಟನೆಯನ್ನು ಪೋಲೀಸರಿಗೆ ವರದಿ ಮಾಡದೇ ಪ್ರಕರಣವನ್ನೇ ಮುಚ್ಚಿ ಹಾಕಲು ಪ್ರಯತ್ನಿಸಿದರು. ಆದರೆ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘದ ಕಾರ್ಯಕರ್ತರು ಸ್ಥಳಕ್ಕೆ ಧಾವಿಸಿ, ಆ ಕಾರ್ಮಿಕರ ಬಂಧುಗಳಿಗೆ ವಿಷಯ ತಿಳಿಸಿದರು. ಹೋಟೆಲ್ ಮಾಲೀಕರು ಕಾರ್ಮಿಕರಿಗೆ ಸಂಬಂಧಿಸಿ ಯಾವುದೇ ದಾಖಲೆ ವಗೈರೆಯನ್ನೇ ಇಟ್ಟಿರಲಿಲ್ಲ.

22-3-82 ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘದ (CITU) ನೇತೃತ್ವದಲ್ಲಿ ಸುಮಾರು 1000 ಕಾರ್ಮಿಕರ ಬೃಹತ್ ಮೆರವಣಿಗೆ ನಡೆದು ದುರ್ಘಟನೆಯ ಕಾರಣ ಕಂಡುಹಿಡಿಯಬೇಕೆಂದೂ, ಮೃತರ ಕುಟುಂಬದವರಿಗೆ ಸೂಕ್ತ ಪರಿಹಾರ ಧನ ಕೊಡಬೇಕೆಂತಲೂ, ಮುನ್ನೂಚನೆ ಕ್ರಮ ಕೈಕೊಳ್ಳದೇ ದುರ್ಘಟನೆಗೆ ಕಾರಣನಾದ ಹೋಟೆಲ್ ನ್ಯೂ ತಾಜ್‌ನ ಮಾಲೀಕನ ಮೇಲೆ ಕ್ರಮ ಕೈಕೊಳ್ಳಬೇಕೆಂತಲೂ ಸರ್ಕಾರಕ್ಕೆ ಒತ್ತಾಯಿಸಲಾಯಿತು

ಸಿ. ಪಿ. ಐ.ನ ಕರಡು ರಾಜಕೀಯ ನಿರ್ಣಯ

ಎಂ. ಬಸವಪುನ್ನಯ್ಯ

ಯುದ್ಧಾಪಾಯದ ವಿರುದ್ಧ ಹೋರಾಟ

[ಕಳೆದ ಸಂಚಿಕೆಯಿಂದ]

ಶಾಂತಿಗಾಗಿ ಸಿ. ಪಿ. ಐ. ವೇದಿಕೆ

ಈ ರೀತಿಯದೆ ಸಿ.ಪಿ.ಐ. ನ ಶಾಂತಿ ವೇದಿಕೆ. ಈ ವೇದಿಕೆಯ ಮೇಲೆ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಶಾಂತಿಪ್ರಿಯ ಶಕ್ತಿಗಳನ್ನು ಒಟ್ಟುಗೂಡಿಸಬೇಕು ! ಜಾಗತಿಕ ಶಾಂತಿ, ಸಾಮ್ರಾಜ್ಯಶಾಹಿ ವಿರೋಧ ಹಾಗೂ ಸಮಾಜವಾದವನ್ನು ರಕ್ಷಿಸಬೇಕಾದರೆ, ಸಿ.ಪಿ.ಐ. ಪ್ರಕಾರ, 50 ಶೇಕಡಾ ಪ್ರಹಾರವನ್ನು ಅಮೇರಿಕದ ಸಾಮ್ರಾಜ್ಯ ಶಾಹಿಗಳ ವಿರುದ್ಧ ಉಳಿದ 50 ಶೇಕಡವನ್ನು ಅಮೇರಿಕಾದ ಸಾಮ್ರಾಜ್ಯಶಾಹಿಯ ಮಿತ್ರನಾದ ಬೈಜಿಂಗ್ ವಿರುದ್ಧ ನಡೆಸಬೇಕು ! ಸಿ.ಪಿ.ಐ. (ಎಂ) ಇಂತಹದೊಂದು 'ಶಾಂತಿ ವೇದಿಕೆ' ಯ ಹತ್ತಿರವಾದರೂ ಸುಳಿಯುತ್ತದೆ ಎಂದು ಸಿ.ಪಿ.ಐ. ನಿರೀಕ್ಷಿಸುತ್ತದೆಯೇ ? ಯುದ್ಧ ಮತ್ತು ಶಾಂತಿಯ ನಿರ್ಧಾರಕ ವಿಷಯದಲ್ಲೂ ಸಿ. ಪಿ. ಐ. (ಎಂ) ನ್ನು ದೂರವಿಡಲು ಸಿ.ಪಿ.ಐಗೆ ಆಸಕ್ತಿಯಿರುವುದಾದರೆ "ಸಿ.ಪಿ.ಐ. ಮತ್ತು ಸಿ. ಪಿ. ಐ. (ಎಂ) ನಡುವೆ ಎಲ್ಲಾ ಹಂತಗಳಲ್ಲಿ ಕಾರ್ಯಾಚರಣೆಯಲ್ಲಿ ಐಕ್ಯತೆ" ಅಗತ್ಯ ಎಂಬ ಅಟ್ಟಹಾಸದ ಹೇಳಿಕೆಯ ಮೇಲೆ ವಿಶ್ವಾಸವಿಡಬಹುದೇ ?

ಜನರನ್ನು ರಂಜಿಸುವ ರೀತಿಯಲ್ಲಿ ಸಿ.ಪಿ.ಐ.ನ ನಿರ್ಣಯ "ಭಾರತದ ಜನತೆ ಭಾರತ ಮತ್ತು ಚೀನಾದ ಸಂಬಂಧಗಳನ್ನು ಸಾಮಾನ್ಯಗೊಳಿಸುವಬಗ್ಗೆ ದೃಢರಾಗಿದ್ದಾರೆ, ಕಾತರರಾಗಿದ್ದಾರೆ" ಎಂದು ಒತ್ತಿ ಹೇಳುತ್ತದೆ. ಸಿ.ಪಿ.ಐ.ನ ಶರತ್ತುಗಳೇನು ? ಅವು ಬಹಳ ಇವೆ. ಮೊದಲನೆಯದಾಗಿ " ಬೈಜಿಂಗ್ ಆಳರಸರು ತಮ್ಮ ಈಗಿನ ವಿಸ್ತರಣಾವಾದೀ ಹಾಗೂ ಅಮೇರಿಕಾದ ಸಾಮ್ರಾಜ್ಯಶಾಹಿಯೊಂದಿಗೆ ಕೂಟದ ನೀತಿಯನ್ನು ಬಿಟ್ಟುಬಿಡಬೇಕು." ಎರಡನೇಯದಾಗಿ, ಸೋವಿಯತ್ ಸಂಘದೊಂದಿಗೆ ಜಂಟೀ ರಂಗ ಸ್ಥಾಪಿಸಿ 'ಪಂಚಶೀಲ' ದ ದಾರಿಗೆ ಹಿಂದಿರುಗಬೇಕು ! ಬೈಜಿಂಗ್ ನಾಯಕರು ಸಿ.ಪಿ.ಐ. ಶರತ್ತುಗಳನ್ನು ಒಪ್ಪದಿದ್ದರೆ ಅವರ "ಭಾರತದೊಂದಿಗೆ ಸಂಬಂಧ ಸಾಮಾನ್ಯಗೊಳಿಸುವ ಈಗಿನ ಶ್ರಮಗಳು ಭಾರತ-ಸೋವಿಯತ್ ಗೆಳೆತನವನ್ನು ಬುಡಮೇಲು ಮಾಡುವ ದುರ್ಬಲಗೊಳಿಸುವ ಜಾಣತಂತ್ರವಲ್ಲದೆ ಬೇರೇನೂ ಅಲ್ಲ"

ಹೀಗಿವೆ ಸಿ.ಪಿ.ಐ. ನ ಪೊಳ್ಳು ಆಜ್ಞೆಗಳು ಹಾಗೂ ಭಾರತ-ಚೀನಾ ಸಂಬಂಧಗಳನ್ನು ಸಾಮಾನ್ಯೀಕರಿಸಲು ಅದರ ಶರತ್ತುಗಳು ! ಹೀಗಿದ್ದೂ "ಚೀನೀ ನಾಯಕತ್ವದ ಬಗ್ಗೆ ಸಿ. ಪಿ. ಐ. (ಎಂ) ತಳೆದ ರಾಜಕೀಯ-ಸೈದ್ಧಾಂತಿಕ ನಿಲುವು ಎಡ ಒಕ್ಕಟ್ಟು ಬಲಪಡಿಸುವಲ್ಲಿ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ ಕಟ್ಟುವಲ್ಲಿ ಅಡ್ಡಿಯಾಗುತ್ತಿರುವ ಅಂಶಗಳು" ಎಂದು ತಣ್ಣನೆ ಸ್ವರದಲ್ಲಿ ಅದು ಹೇಳುತ್ತದೆ.

ಇದೊಂದೇ ಭಿನ್ನಾಭಿಪ್ರಾಯವಲ್ಲ

ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ. ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯ "ಚೀನೀ ನಾಯಕತ್ವಕ್ಕೆ ಸಂಬಂಧ ಪಟ್ಟಂತೆ" ಮಾತ್ರ ಎಂಬುದು ಸರಿಯಲ್ಲ. ನಿಜವಾದ ಭಿನ್ನಾಭಿಪ್ರಾಯ ಇನ್ನೂ ದೊಡ್ಡದಾಗಿದೆ ಹಾಗೂ ಗಂಭೀರ ಸ್ವರೂಪದ್ದಾಗಿದೆ. ಸಿ.ಪಿ.ಐ. ಸಮಾಜವಾದೀ ಚೀನಾವನ್ನು ಅಮೇರಿಕಾ ಸಾಮ್ರಾಜ್ಯಶಾಹಿಯ ಮಿತ್ರ ಎಂದು ಹೇಳಿ ಅದು ಶಾಂತಿ ಹಾಗೂ ಸಮಾಜವಾದದ ಉದ್ದೇಶಕ್ಕೆ ದೂರವಾಗಿ ಬಿಟ್ಟಿದೆ ಎಂದು ತೀರ್ಮಾನಿಸಿ ಬಿಟ್ಟಿದೆ. ಸಿ.ಪಿ.ಐ.(ಎಂ)ನ ದೃಢ ಅಭಿಪ್ರಾಯ-ಜನತಾ ಚೀಣಾ ಜಗತ್ತಿನ ಎರಡುದೊಡ್ಡ ಸಮಾಜವಾದೀ ದೇಶಗಳಲ್ಲಿ ಒಂದು ಆದರೆ ಅದರ ಸದ್ಯದ ವಿರೋಧಿಧೋರಣೆ ಮಾರ್ಕ್ಸ್‌ವಾದ – ಲೇನಿನ್‌ವಾದದಿಂದ ದೂರ ಸರಿದಿರುವ ಗಂಭೀರ ತಪ್ಪುಮಾಡಿದೆ. ಅದನ್ನು ತಕ್ಷಣ ಸರಿಪಡಿಸಿಕೊಳ್ಳಬೇಕಾಗಿದೆ.

ಸಿ ಪಿ ಐ. ನಿಜವಾಗಿಯೂ ಚೀನೀ ಜನತಾ ಗಣರಾಜ್ಯವನ್ನು ಸಮಾಜವಾದಿಯೆಂದು ಪರಿಗಣಿಸುವುದಾದರೆ ಅದರೊಂದಿಗೆ ಕೆಲವು ಕರ್ತವ್ಯಗಳನ್ನೂ ಪಾಲಿಸಬೇಕಾಗುತ್ತದೆ. ಅದರ ಸಮಾಜವಾದವನ್ನು ಸಮರ್ಥಿಸುವುದು, ಸಮಾಜವಾದದಲ್ಲಿ ಜನರ ನಂಬಿಕೆಯನ್ನು ಬುಡಮೇಲು ಮಾಡದ ರೀತಿಯಲ್ಲಿ ಅದರ ತಪ್ಪು ಧೋರಣೆಗಳ ಟೀಕೆ ಮಾಡುವುದು, ಅದನ್ನು ಅಮೇರಿಕಾದ ಸಾಮ್ರಾಜ್ಯಶಾಹಿಗಳೊಂದಿಗೆ ಸೇರಿಸದಿರುವುದು ಇತ್ಯಾದಿ. ಜನತಾ ಚೀನಾ ಸೋವಿಯತ್ ಸಂಘವನ್ನು ಸಾಮಾಜಿಕ-ಸಾಮ್ರಾಜ್ಯಶಾಹಿಯೆಂದು ಕರೆದು ಅಮೇರಿಕಾದ ಸಾಮ್ರಾಜ್ಯಶಾಹಿಗಳೊಂದಿಗೆ ಅದನ್ನು ಸೇರಿಸಿ ಮಾತನಾಡುವುದನ್ನು ಸಿ.ಪಿ.ಐ. (ಎಂ) ಹರಿತವಾಗಿ ಟೀಕಿಸುವಾಗ, ಸಮಾಜವಾದಿ ಚೀನಾ ಅಮೇರಿಕಾದ ಸಾಮ್ರಾಜ್ಯಶಾಹಿಗಳೊಂದಿಗೆ ಕೈಮಿಲಾಯಿಸಿದ ಮಿಲಿಟರಿ ಸರ್ವಾಧಿಕಾರ ಎಂಬ ಸಿ. ಪಿ. ಐ. ನಿಲುವನ್ನು ಸ್ವೀಕರಿಸಲು ಯಾವ ಕಾರಣಗಳೂ ಇಲ್ಲ. ಈ ಎರಡೂ ದೃಷ್ಟಿ ಕೋನಗಳು ಜಾಗತಿಕ ಸಮಾಜವಾದೀ ಬಣವನ್ನು ಅಲ್ಲಗಳೆದು, ಜಾಗತಿಕ ಮಟ್ಟದಲ್ಲಿ ಸಮಾಜವಾದದೆಡೆಗೆ ಪರಿವರ್ತನೆ ಕಾಣುತ್ತಿರುವ ಈ ಯುಗದ ತಪ್ಪು ವಿಶ್ಲೇಷಣೆಗೆ ಎಡೆಮಾಡಿ ಕೊಡುವಂತಹದು.

ಸಮಾಜವಾದೀ ಚೀನಾ ಹಾಗೂ ತತ್ಪರಿಣಾಮವಾಗಿ ಜಾಗತಿಕ ಸಮಾಜವಾದೀ ಶಕ್ತಿಗಳ ವಿಶ್ಲೇಷಣೆಯಲ್ಲಿ ಇರುವ ಇಷ್ಟೊಂದು ವ್ಯತ್ಯಾಸ ಭಾರತದ ಕಮ್ಯುನಿಸ್ಟ್ ಚಳುವಳಿಯ ಒಕ್ಕಟ್ಟಿಗೆ ಮಾತ್ರವಲ್ಲ, ತಾಪಾಣುಯುದ್ಧದ ಅಪಾಯದಂತಹ ಪ್ರಮುಖ ಪ್ರಶ್ನೆಗಳ ಮೇಲೆ ಎಡ ಪಂಥೀಯರ ಸಂಯುಕ್ತ ಕಾರ್ಯಾಚರಣೆಗೂ ಅಡ್ಡಿಯಾಗಿದೆ. ತಮ್ಮ 12ನೇ ಅಧಿವೇಶನದಲ್ಲಿ ಪ್ರತಿಪಾದಿಸುವ ಈ ಕಾರ್ಯನೀತಿಯ ಗಂಭೀರ ಪರಿಣಾಮಗಳ ಬಗ್ಗೆ ಸಿ.ಪಿ.ಐ. ನಾಯಕರು ತೀವ್ರವಾಗಿ ಯೋಚಿಸಿ, ದೇಶದಲ್ಲಿ ಕಮ್ಯುನಿಸ್ಟ್ ಒಕ್ಕಟ್ಟಿನ ಪ್ರಶ್ನೆಯಂತೂ ದೂರವಿರಲಿ, ಎಡ ಒಕ್ಕಟ್ಟು ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ಒಕ್ಕಟ್ಟಿಗೆ ನೇರವಾಗಿ ಹಾಗೂ ತಕ್ಷಣ ಮಾರಕವಾಗುವಂತಹ ಕಾರ್ಯನೀತಿಗೆ ಪಕ್ಷವನ್ನು ಬದ್ಧಗೊಳಿಸಲಿಕ್ಕಿಲ್ಲ ಎಂದು ನಾವು ಆಶಿಸುತ್ತೇವೆ.

ಧೋರಣೆಗಳಲ್ಲಿ ಬದಲಾವಣೆಯಿಲ್ಲ

ಸಿ. ಪಿ. ಐ.ನ ಕರಡು ನಿರ್ಣಯ ಸಿ. ಪಿ. ಐ. (ಎಂ.)ನ ಧೋರಣೆಗಳಲ್ಲಿ ಪರಿವರ್ತನೆಯನ್ನು ಕಾಣುತ್ತಿದೆ. ಇದರಿಂದಾಗಿ ಸಂಯುಕ್ತ ಕಾರ್ಯಾಚರಣೆಗಳಿಗೆ, ಎಡ ಒಕ್ಕಟ್ಟಿಗೆ ಅನುವಾಯಿತಂತೆ. ಯಾವುದು ಈ ಬದಲಾವಣೆಗಳು ? ಕರಡು ನಿರ್ಣಯದ ಪ್ರಕಾರ "ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಕ್ರಾಂತಿಕಾರೀ ಪಾತ್ರವನ್ನು ಸ್ವೀಕರಿಸಿದ್ದು ಭಾರತ-ಸೋವಿಯೆತ್ ಸ್ನೇಹ ಸಂಬಂಧಗಳಿಗೆ ಮನ್ನಣೆ ನೀಡಿದ್ದು", "ಜನತಾ ಪಕ್ಷದ ಸರಕಾರಕ್ಕೆ ಬೆಂಬಲ ವಾಪಸು ಪಡೆದದ್ದು", "ಚೀನಾ ಕಮ್ಯುನಿಸ್ಟ್ ಪಕ್ಷದ ಧೋರಣೆಗಳನ್ನು ಗಂಭೀರ ಪುನರ್ವಿಶ್ಲೇಷಣೆ ಮಾಡಿದ್ದು" ಇತ್ಯಾದಿ. ಈ ರೀತಿ ಸಿ.ಪಿ.ಐ (ಎಂ) ವಿರುದ್ಧ ವಾದ ಗೆಲ್ಲುವ ಅಗ್ಗದ ಪ್ರಯತ್ನಗಳಿಗೆ ಗಂಭೀರವಾದ ಉತ್ತರಗಳ ಅಗತ್ಯವಿಲ್ಲ.

ನ್ಯಾಯವಾಗಿ ಹೇಳಬೇಕಾದರೆ ಸಿ.ಪಿ.ಐ. (ಎಂ) ಧೋರಣೆಗಳಲ್ಲಿ ಪರಿವರ್ತನೆಗಳಾಗಿಲ್ಲ. ಅಲ್ಲದೆ ಸಿ.ಪಿ.ಐ.ನ ಸೈದ್ಧಾಂತಿಕ, ಕಾರ್ಯಕ್ರಮಾತ್ಮಕ ನಿಲುವುಗಳಲ್ಲೂ ದೊಡ್ಡ ಬದಲಾವಣೆಯೇನೂ ಆಗಿಲ್ಲ.

ಸಿ.ಪಿ.ಐ. (ಎಂ) ಮಟ್ಟಿಗೆ ಹೇಳುವುದಾದರೆ ಅದು ಮೊದಲಿಂದಲೂ, ಎಲ್ಲಾ ಸಮಾಜವಾದೀ ದೇಶಗಳನ್ನು ಸಮರ್ಥಿಸುತ್ತಾ ಬಂದಿದೆ. ಅದು ಸೋವಿಯತ್ ವಿರೋಧಿಯೂ ಆಗಿರಲಿಲ್ಲ, ಚೀನಾ-ವಿರೋಧಿಯೂ ಆಗಿರಲಿಲ್ಲ. ಸಾಮ್ರಾಜ್ಯಶಾಹಿ ವಿರುದ್ಧ ಯಾವುದಕ್ಕೂ ಜಗ್ಗದ ಹೋರಾಟಕ್ಕೆ ಅದು ಬದ್ಧವಾಗಿದೆ. ಸಾಮ್ರಾಜ್ಯಶಾಹಿಗೆ ಯಾವುದೇ ಮೂಲೆಯಿಂದ ಬೆಂಬಲ ಸಿಕ್ಕರೂ ಅದನ್ನು ಖಂಡಿಸುತ್ತದೆ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನೀತಿಗಳು ಹಾಗೂ ಕಾರ್ಮಿಕ ಅಂತರ್‌ರಾಷ್ಟ್ರೀಯತೆಯ ಆಧಾರದ ಮೇಲೆ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಐಕ್ಯವನ್ನು ಅದು ಬಯಸುತ್ತದೆ. ಮಾರ್ಕ್ಸ್‌ವಾದಿ ಲೆನಿನ್‌ವಾದಿ ಸಿದ್ಧಾಂತಕ್ಕೆ ಬದ್ಧವಾಗಿದೆ. ಅದರಿಂದ ದೂರ ಸರಿಯುವ ಬಲ-ಪರಿಷ್ಕರಣವಾದಿಗಳಿರಲಿ, ಎಡ-ಅಂಧವಾದಿಗಳಿರಲಿ ಎಲ್ಲರ ವಿರುದ್ಧವೂ ಹೋರಾಟ ನಡೆಸುತ್ತದೆ.

ಆಂತರಿಕವಾಗಿ ಅದು ಸರ್ವಾಧಿಕಾರದ ವಿರುದ್ಧ ವಿಶಾಲವೇದಿಕೆ ನಿರ್ಮಿಸಲು, ಯಾರ್ಯಾರನ್ನು ಒಟ್ಟು ಸೇರಿಸಲು ಸಾಧ್ಯವೋ ಅಂತಹ ಎಲ್ಲ ಶಕ್ತಿಗಳನ್ನು ಸೇರಿಸಿ ಸಂಯುಕ್ತ ಕಾರ್ಯಾಚರಣೆ ಸಂಘಟಿಸಲು, ಸದ್ಯದ ವರ್ಗ ಸಂಬಂಧಗಳಲ್ಲಿ ಬದಲಾವಣೆ ತಂದು ಕ್ರಾಂತಿಯೆಡೆ ಮುನ್ನಡೆಯಲು ಸಹಾಯಕವಾಗುವ ಹಾಗೂ ಬೂರ್ಜ್ವಾ-ಭೂಮಾಲಿಕ ಆಳ್ವಿಕೆಗೆ ರಾಷ್ಟ್ರೀಯ ಪರ್ಯಾಯವಾಗುವ ಎಡ ಹಾಗೂ ಪ್ರಜಾಪ್ರಭುತ್ವವಾದೀ ರಂಗ ರಚಿಸಲು ಪ್ರಯತ್ನಿಸುತ್ತದೆ. ಸಿ.ಪಿ.ಐ. (ಎಂ) ನ ಧೋರಣೆಗಳ ಈ ಮೂಲಭೂತ ಅಂಶಗಳು ಸರಿಯಾದವುಗಳು ಎಂದು ಅನುಭವ ತೋರಿಸಿಕೊಟ್ಟಿರುವಾಗ ಅವನ್ನು ಬದಲಿಸುವ ಅಗತ್ಯವೇನೂ ಇಲ್ಲ.

ಸಿ.ಪಿ.ಐ. ನ ಧೋರಣೆಗಳಲ್ಲಿ ಕೇವಲ ಒಂದು ಬದಲಾವಣೆ ಕಂಡುಬಂದಿದೆ. ದಶಕದ ಕಾಲ ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರದೊಂದಿಗೆ ಸಹಕಾರದ ನಿಲುವನ್ನು ಬಿಟ್ಟುಕೊಟ್ಟು ಅದು ಸಿ.ಪಿ.ಐ. (ಎಂ) ಹಾಗೂ ಇತರ ಎಡಪಕ್ಷಗಳೊಂದಿಗೆ ಒಕ್ಕಟ್ಟು ಹಾಗೂ ಜಂಟೀ ಕಾರ್ಯಾಚರಣೆಗಳಿಗೆ ಇಳಿಯಲಾರಂಭಿಸಿದೆ. ಕೇರಳದ ಮಾರ್ಕ್ಸ್‌ವಾದಿ ವಿರೋಧೀ ರಂಗದಿಂದ ಹೊರಬಂದ ಮೇಲೆ ಇದು ಇನ್ನಷ್ಟು ಸ್ಪಷ್ಟವಾಗಿದೆ. ಹೀಗಿರುವಾಗ ಎರಡೂ ಪಕ್ಷಗಳ ಬೆಂಬಲಿಗರಿಗೆ ಹಾಗೂ ಸಾರ್ವಜನಿಕರನ್ನು ಈ ರೀತಿ ಬದಲಾವಣೆಗಳಾಗಿವೆ ಎಂಬ ಹೇಳಿಕೆಗಳಿಂದ ಏಕೆ ಮೋಸಗೊಳಿಸಬೇಕು ?

ಹಿಂದಿನ ಒತ್ತು ಕಾಣುತ್ತಿಲ್ಲ

ಕರಡು ನಿರ್ಣಯದ ಬಗ್ಗೆ ನಮ್ಮ ಟೀಕೆಗಳನ್ನು ಪೂರ್ಣಗೊಳಿಸುವ ಮೊದಲು ಒಂದಂಶವನ್ನುಗಮನಿಸಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ ಎಡ ಒಕ್ಕಟ್ಟು ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದೀ ಪರ್ಯಾಯದ ಬಗ್ಗೆ ಈ ಹಿಂದೆ ಪಕ್ಷ ಕೊಡುತ್ತಿದ್ದಷ್ಟು ಒತ್ತು ಈ ಕರಡು ನಿರ್ಣಯದಲ್ಲಿ ಕಾಣಿಸುತ್ತಿಲ್ಲ.

"ನಮ್ಮ ಪಕ್ಷವನ್ನು ಹಾಗೂ ಸಾಮೂಹಿಕ ಸಂಘಟನೆಗಳನ್ನು ಬಲಗೊಳಿಸದೆ... ಪಕ್ಷದ ಚಟುವಟಿಕೆಗಳನ್ನು ಬಲಗೊಳಿಸಿ ಜನ ಸಾಮಾನ್ಯರ ನಡುವೆ ಅತೀ ಕೆಳಗಿನ ಹಂತದಲ್ಲಿ ಪಕ್ಷದ ಪ್ರಭಾವವನ್ನು ಕ್ರೋಢೀಕರಿಸದೆ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕಟ್ಟು ಮೂಡಿಬರುವುದು ಸಾಧ್ಯವಿಲ್ಲ" ಎಂದು ಈ ನಿರ್ಣಯದಲ್ಲಿ ಒತ್ತಿ ಹೇಳಲಾಗಿದೆ. ತನ್ನ ಪಕ್ಷದ ಅಧಿವೇಶನದ ನಿರ್ಣಯದಲ್ಲಿ ಸಿ.ಪಿ.ಐ. ಈ ರೀತಿ ಹೇಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಇಲ್ಲೊಂದು ಅಂಶ ತಿಳಿಸಬಯಸುತ್ತೇವೆ. ಪಕ್ಷ ಬೆಳೆದು, ಹರಡಿ ಬಲಶಾಲಿಯಾಗಬೇಕಾದರೆ ಅದು ಸರಿಯಾದ ರಾಜಕೀಯ ಕಾರ್ಯನೀತಿಯ ಪ್ರತಿಪಾದನೆ, ಎಡ ಒಕ್ಕಟ್ಟು, ಎಡ ಹಾಗೂ ಪ್ರಜಾಪ್ರಭುತ್ವವಾದೀ ಒಕ್ಕಟ್ಟು ಇತ್ಯಾದಿ ಘೋಷಣೆಗಳ ಸರಿಯಾದ ಅನುಷ್ಠಾನ ಹಾಗೂ ಯಾರನ್ನೆಲ್ಲ ಒಟ್ಟುಗೂಡಿಸಲು ಸಾಧ್ಯವಿದೆಯೋ ಅವರನ್ನೆಲ್ಲಾ ಸೇರಿಸಿ ಸಂಯುಕ್ತ ಕಾರ್ಯಾಚರಣೆ ಇವೆಲ್ಲದರ ಮೇಲೆ ಹೊಂದಿಕೊಂಡಿದೆ.

ಸಿ. ಪಿ. ಐ.ನ ಹನ್ನೆರಡನೇ ಅಧಿವೇಶನ ಈ ಅವಧಿಯ ಅನುಭವಗಳಿಂದ ವಿಶೇಷವಾಗಿ 1969ರ ಕೊನೆಯ ಅವಧಿಯಲ್ಲಿ ಭಾರತೀಯ ಎಡ ಪಂಥದಲ್ಲಿ ವಿಭಜನೆ ಯಾದನಂತರದ ಕಾಲಘಟ್ಟದಲ್ಲಿನ ಅನುಭವಗಳಿಂದ ಸರಿಯಾದ ಪಾಠ ಕಲಿಯಲು ಶ್ರಮ ಪೂರ್ವಕ ಯತ್ನ ನಡೆಸುತ್ತದೆ ಎಂಬುದು ನಮ್ಮ ಕಳಕಳಿಯ ಆಶಯ.

ಎಡ ಒಗ್ಗಟ್ಟಿನ ಮುನ್ನಡೆ

ಕಳೆದೆರಡು ವರ್ಷಗಳಲ್ಲಿ ಎಡ ಒಗ್ಗಟ್ಟಿನಲ್ಲಿ ಬದಲಾವಣೆ ಹಾಗೂ ಮುನ್ನಡೆಯನ್ನು ವಿಶೇಷವಾಗಿ ಸಿ. ಪಿ. ಐ.(ಎಂ) ಹಾಗೂ, ಸಿ.ಪಿ ಐ ನಡುವೆ ಒಗ್ಗಟ್ಟನ್ನು ನಾವು ತೃಪ್ತಿಯಿಂದ ಗಮನಿಸುತ್ತೇವೆ. ಚೀನಾ ಜನತಾ ಗಣರಾಜ್ಯದ ವಿಶ್ಲೇಷಣೆ ಹಾಗೂ ಸರ್ವಾಧಿಕಾರ ವಿರೋಧೀ ಪ್ರತಿರೋಧ ಇವುಗಳ ಬಗ್ಗೆ ಇರುವ ಭಿನ್ನಾಭಿಪ್ರಾಯ ಮೇಲ್ಮಟ್ಟಕ್ಕೆ ಸಣ್ಣದೇನಿಸಿದರೂ ವಾಸ್ತವವಾಗಿ ಅವು ಬಹಳ ಮಹತ್ವಪೂರ್ಣ ಭಿನ್ನಗಳು. ಈ ತಡೆಗಳನ್ನು ಪಾರು ಮಾಡಲು ಹಾಗೂ ದೇಶದ ಎಡ ಪಂಥೀಯರು ಮುಂಬರಲಿರುವ ಮಹತ್ವದ ಕಾಲಘಟ್ಟದಲ್ಲಿ ತಮ್ಮ ಚಾರಿತ್ರಿಕ ಪಾತ್ರ ವಹಿಸಲು ಅನುಕೂಲವಾಗುವಂತೆ ಸಿ. ಪಿ. ಐ.ನ ಅಧಿವೇಶನ ದಾರಿ ಕಂಡುಕೊಳ್ಳಬೇಕು. ★

★ [ಮಾರ್ಚ್ 14ರಿಂದ 28 ರ ತನಕ ವಾರಣಾಸಿಯಲ್ಲಿ ಸಿ ಪಿ.ಐ. ನ 12 ನೇ ಅಖಿಲ ಭಾರತ ಅಧಿವೇಶನ ನಡೆಯಿತು. ಈ ಅಧಿವೇಶನದ ಮುನ್ನವೇ ಅಂದರೆ ಫೆಬ್ರವರಿ 21 ಮತ್ತು 28 ರ ಪೀಪಲ್ಸ್ ಡೆಮಾಕ್ರಸಿಯಲ್ಲಿ ಈ ಲೇಖನಗಳನ್ನು ಕಾಂ| ಎಂ. ಬಸವಪುನ್ನಯ್ಯ ಬರೆದಿದ್ದರು. ನಮ್ಮ ಓದುಗರ ಅವಗಾಹನೆಗಾಗಿ ನಾವು ಐಕ್ಯರಂಗದ ಮಾ. 14, 21, 28 ಮತ್ತು ಈ (4-4-82) ಸಂಚಿಕೆಗಳಲ್ಲಿ ಕಾಂ| ಎಂ. ಬಿ. ಯವರ ಲೇಖನದ ಅನುವಾದ ಪ್ರಕಟಿಸಿದ್ದೇವೆ.]

ಇ. ಎಂ. ಎಸ್. ಅವರ

“ನನ್ನ ಬದುಕು” — ಕೆಲವು ಅನಿಸಿಕೆಗಳು

—ಎಸ್. ಎಸ್. ಹಿರೇಮಠ

ಭಾರತದ ಎಡ ರಾಜಕೀಯ ಪಕ್ಷವೊಂದರ ಪ್ರಮುಖ ವ್ಯಕ್ತಿಯ ಆತ್ಮಚರಿತ್ರೆಯನ್ನು ಓದುವ ಕುತೂಹಲ ಸಹಜವಾಗೆ ತೀವ್ರವಾಗಿರುತ್ತದೆ. ಇ. ಎಂ. ಎಸ್. ನಂಬೂದರಿಪಾದ್ ಅವರ “ನನ್ನ ಬದುಕು” (ಕನ್ನಡಾನುವಾದ ಅಹೋಬಲ ಶಂಕರ.—ವಿಕಾಸ ಪ್ರಕಾಶನ ಮೈಸೂರು) ಒಂದು ‘ರಾಜಕೀಯ ಆತ್ಮಕತೆ.’ ಮತ್ತು ಆಧುನಿಕ ಕೇರಳದ ವಿಶಿಷ್ಟ ಸಂದರ್ಭದ ಸಾಂಸ್ಕೃತಿಕ ದಾಖಲೆ.

ನವ ಭಾರತದ ನಿರ್ಮಾಣದ ಚಾರಿತ್ರಿಕ ಸಂದರ್ಭದಲ್ಲಿ ಮಹತ್ವಪೂರ್ಣ ಆಕರಗ್ರಂಥ—‘ನನ್ನ ಬದುಕು.’ ಅದರ ಹಲವು ಮುಖಗಳ ಚರ್ಚೆ ನಡೆಯಬೇಕು.

ಸ್ವತಂತ್ರಪೂರ್ವ ಭಾರತದ ಮಹತ್ವಪೂರ್ಣ ರಾಜಕೀಯ ಘಟನೆಗಳ ಮೌಲ್ಯೀಕರಣ ಈ ಗ್ರಂಥದಲ್ಲಿ ನಡೆಯುವದರಿಂದಲೂ ತುಂಬ ಜವಾಬ್ದಾರಿಯಿಂದ, ಗ್ರಂಥದ ರಾಜಕೀಯ ಮುಖದ ಅಭ್ಯಾಸ ಆಗಬೇಕಾಗುತ್ತದೆ.

ಭಾರತದ ಪ್ರಗತಿ ಶೀಲ ಚರಿತ್ರೆಯಲ್ಲಿ ಭಾಗಿಯಾಗುವ ಪ್ರಜ್ಞಾವಂತನ ವೈಜ್ಞಾನಿಕ ವಿಶ್ಲೇಷಣೆಯ ಪೂರ್ವ ಭಾಗನೆ ಈ ಗ್ರಂಥವಾಗಿರುವುದರಿಂದ ಅದು ಮಹತ್ವಪೂರ್ಣ ದಾಖಲೆ ಎಂದು ಹೇಳಬೇಕಾಗಿರುವುದು.

ಕೇರಳದ ರಾಜಕೀಯ, ಭಾರತದ ರಾಜಕೀಯ ಇತಿಹಾಸದಲ್ಲೆ ಅದ್ಭುತ ಚಳುವಳಿಗಳ ಆಗರ. ‘ಭಾರತದ ರಾಜಕೀಯ ಪ್ರಯೋಗಶಾಲೆ ಕೇರಳ’ ಎಂಬ ಮಾತಿದೆ. ಜಗತ್ತಿನಲ್ಲೇ ಪ್ರಥಮ ಬಾರಿಗೆ ಚುನಾವಣೆಯ ಮೂಲಕ ಕಮ್ಯುನಿಸ್ಟ್ ಸರ್ಕಾರ ರಚಿಸಿದ ರಾಜ್ಯ ಕೇರಳ, ಅದರ ಮುಖ್ಯ ಮಂತ್ರಿ ಪ್ರಸ್ತುತ ಗ್ರಂಥದ ಲೇಖಕರಾಗಿರುವುದು, ಇದೆಲ್ಲ ಈ ಸಂದರ್ಭದಲ್ಲಿ ಪೂರಕಾಂಶಗಳೂ, ಗ್ರಂಥದ ಅಭ್ಯಾಸಕ್ಕೆ ಪೂರ್ವ ಗ್ರಹಿಕೆಗಳೂ ಆಗಿರುತ್ತವೆ.

ಭಾರತದ ಎಡ ರಾಜಕೀಯ ಚಳುವಳಿಯನ್ನು ನಿರ್ದೇಶಿಸುವ ಗುರುತರ ಜವಾಬ್ದಾರಿಯ ಕಾಲಘಟ್ಟದಲ್ಲಿ ಹುಟ್ಟಿಕೊಂಡ ಈ ಗ್ರಂಥ ತನ್ನ ಮಹತ್ವವನ್ನೂ ಹೆಚ್ಚಿಸಿಕೊಳ್ಳುವದು.

ಗಾಂಧಿಯುಗ, ಸ್ವಾತಂತ್ರ್ಯಪೂರ್ವ ನೆಹರು, ಜೆ. ಪಿ. ಯುಗದ ವಿಶಿಷ್ಟ ಸಂಕೀರ್ಣ ಕಾಲದ ಯುವ ಬರಹವಾದ ‘ನನ್ನ ಬದುಕು’ ಗ್ರಂಥದ ರಾಜಕೀಯ ಆಯಾಮಗಳ ದೀರ್ಘ ಚರ್ಚೆ ಬೇರೆ ಲೇಖನದ ವಿಷಯ. ಈ ಲೇಖನದಲ್ಲಿ ಗ್ರಂಥವನ್ನು ಓದುವಾಗ ಮಾಡಿಕೊಂಡ ಟಿಪ್ಪಣಿಗಳನ್ನು ಒಂದೆಡೆ ಸಂಕಲಿಸುವ ಕೆಲಸ ಮಾತ್ರ ಮಾಡುತ್ತೇನೆ. ಗ್ರಂಥದ ಹತ್ತಾರು ಸಂಗತಿಗಳ ವಿವಿಧ ರೀತಿಯ, ಅಭ್ಯಾಸ, ವಿವೇಚನೆ ನಡೆಯಬೇಕೆಂದು ತಿಳಿಯುತ್ತೇನೆ.

ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಭಾರತದ ಪರಿಸ್ಥಿತಿ,—ವಿಶಿಷ್ಟ ಪರಂಪರೆ, ಸಂಸ್ಕೃತಿ,ವೈವಿಧ್ಯತೆಯ ಹಿನ್ನೆಲೆಯಲ್ಲಿ ಗಮನಿಸಿದಾಗ—ವಿಶೇಷ ಚರ್ಚೆಗೆ ಒಳಪಡುತ್ತ ಬಂದಿದೆ. ಅದು ಸಹಜವಾದುದು ಕೂಡ. ಉದಾಹರಣೆಗೆ— ಭಾರತದ ಜಾತಿ ಸಮಸ್ಯೆ. ‘ನನ್ನ ಬದುಕು’ ಗ್ರಂಥದ ಮುಕ್ಕಾಲು ಭಾಗ (ಒಟ್ಟಾರೆ ಇಡಿಯಾಗಿ) ಹೆಚ್ಚಾಗಿ ಆವರಿಸಿಕೊಂಡಿರುವ ಜಾತಿ ಸುಧಾರಣಾ ಚಳುವಳಿಯನ್ನು ಗಮನಿಸಿದಾಗ ಕೇರಳದ ಕಮ್ಯುನಿಸ್ಟ್ ಚಳುವಳಿಯ ಪೂರ್ವಭಾವಿ ಸಿದ್ಧತೆಗಳಲ್ಲಿ ಈ ಸಂಗತಿಗೆ ಸಂಬಂಧಪಟ್ಟ ಅಂಶಗಳು ಚರ್ಚೆಗೆ ಬರುತ್ತವೆ.

ಗ್ರಂಥ ತಟ್ಟನೆ ಮುಕ್ತಾಯವಾದಂತೆ ತೋರುವುದು. ಸುಮಾರು 1915 ಅಥವಾ 1920 ರಿಂದ ಪ್ರಾರಂಭವಾಗಿ 1937 ರ ವರೆಗಿನ ಕಾಲಾವಧಿಯ ಕೇರಳವನ್ನು ಕಣ್ಮುಂದೆ ನಿಲ್ಲಿಸಲೆತ್ನಿಸಿದ್ದಾರೆ ಇ. ಎಂ. ಎಸ್. ದೇಶದ ಆ ಕಾಲದ ರಾಜಕೀಯ ಚಳುವಳಿಯ ಅಲೆಗಳು ಭಾರತದ ದಕ್ಷಿಣದ ಮೂಲೆಯಾದ ಕೇರಳಕ್ಕೆ ಬಂದು ತಾಕುತ್ತಿದ್ದ ರೀತಿ, ಅದಕ್ಕೆ ತೋರುತ್ತಿದ್ದ ಪ್ರತಿಕ್ರಿಯೆಗಳು, ಚಲನೆಗಳು, ಕೇರಳದಲ್ಲಿ ವಿಶಿಷ್ಟವಾಗಿ, ನಂಬೂದರಿ ಬ್ರಾಹ್ಮಣ ಸಮಾಜ ವ್ಯವಸ್ಥೆಯಲ್ಲಿ ಜತೆ ಜತೆಗೆ ನಡೆದು ಬಂದ ಸುಧಾರಣಾ ಚಳುವಳಿಗಳು, ಇವೆಲ್ಲಕ್ಕೂ, ಭವ್ಯವಾದ ಜವಾಬ್ದಾರಿಯುತ ಪ್ರಜ್ಞಾಪೂರ್ಣ ಸಾಕ್ಷಿಯಾಗಿ ನಿಂತುಕೊಂಡು ಅದರ ಭಾಗವೂ ಆಗಿ ಬಂದಿರುವ ಇ. ಎಂ. ಎಸ್. ತಮ್ಮ ವೈಯಕ್ತಿಕ ಬದುಕಿನ ಕಷ್ಟ-ಸುಖಗಳ ಮಧ್ಯೆ ಇವುಗಳನ್ನು ಮಾನವೀಯ ಸ್ಪರ್ಶದಲ್ಲಿ ಮಜಲು ಮಜಲಾಗಿ ನಿರ್ದಿಷ್ಟಗೊಳಿಸುತ್ತ ಬರುತ್ತಾರೆ.

ಪುಸ್ತಕದ ಪುಟಗಳ ಮಧ್ಯೆ ಮಾಡಿಕೊಂಡ ಟಿಪ್ಪಣಿಗಳನ್ನು ಈ ಕೆಳಗೆ ದಾಖಲಿಸುತ್ತೇನೆ.

‘ಭೂಲೋಕದ ದೇವತಾ ಸ್ತ್ರೀಯರು’ ಎಂಬ ವ್ಯಂಗ್ಯಭರಿತ ಶೀರ್ಷಿಕೆಯಡಿ ಬ್ರಾಹ್ಮಣರ ಶೋಷಣೆ, ಅವರ ಹೆಂಗಸರನ್ನು ಆಕ್ರಮಿಸಿದ ರೀತಿ, ಎಂಥ ಕ್ರೂರ, ಅಮಾನುಷ, ಹೇಯವಾಗಿತ್ತೆಂಬುದನ್ನು ಮನಕರಗುವಂತೆ(ಹೆಂಗಳೆಯರ ಬಗ್ಗೆ !) ವರ್ಣಿಸುತ್ತಾರೆ.

ಈ ಹಿಂದಿನ ಪುಟಗಳಲ್ಲಿ ಕೇರಳದ ಸಮಾಜದ ಅತ್ಯುನ್ನತ ಸ್ಥಾನಮಾನಗಳಿಂದ ವಿಜೃಂಭಿಸುತ್ತಿರುವ ನಂಬೂದಿರಿ ಬ್ರಾಹ್ಮಣರ ಕ್ರೂರ ಪರಂಪರೆ ಸಂಸ್ಕೃತಿಯ ಸ್ಪಷ್ಟ ಚಿತ್ರಣವಿದೆ. ಮುಂದಿನೆಲ್ಲ ಬರವಣಿಗೆಗೆ ಒಂದು ರೀತಿಯಿಂದ ಇದು ಪೂರ್ವಭಾವಿ ಅಗತ್ಯ ತಿಳುವಳಿಕೆಯಾಗಬೇಕಾದ್ದರಿಂದ, ಮುಖ್ಯವಾದುದು. ‘ತಂಬುರಾನ್ ಪ್ರಭುತ್ವ’ದ (ಊಳಿಗಮಾನ್ಯ ವ್ಯವಸ್ಥೆಯ ಕೊನೆ ತುದಿ, ವಸಾಹತುಶಾಹಿ ಆಕ್ರಮಣ) ಚಿತ್ರ ಕೊಡುವ ಈ ಪುಟಗಳಲ್ಲಿ ಕೇರಳ ಬ್ರಾಹ್ಮಣರ ಪಾರಂಪರಿಕ ಬದುಕು, ಆಢ್ಯತೆ, ಪ್ರತಿಷ್ಠೆಗಳ ಒಳಗಡೆ ನಡೆಯುತ್ತಿದ್ದ ಕ್ರೂರ ಶೋಷಣೆಯ ಪದರುಗಳು ಬಿಚ್ಚಿಕೊಳ್ಳುತ್ತವೆ. ಇದೆಲ್ಲವೂ ಸಂಯಮಪೂರ್ಣವಾದ, ಆತ್ಮೀಯ ಶೈಲಿಯಲ್ಲಿದೆ. ಕಮ್ಯೂನಿಸ್ಟ್ ಸಂಸ್ಕೃತಿಯಲ್ಲಿ, ಸಾಹಿತ್ಯಿಕ ಶೈಲಿಗೆ ಅತ್ಯದ್ಭುತ ಮಾದರಿಯಾಗಿ ಈ ಗ್ರಂಥ ನಿಲ್ಲುವುದೆಂಬುದನ್ನು ಮರೆಯುವಂತಿಲ್ಲ.

‘ದೇವತೆಗಳು-ಪಿಶಾಚಿಗಳು’ ಎಂಬ ಕಲ್ಪನಾ ಪ್ರಪಂಚದ ಮೊದಲನೆ ಭಾಗ ಮುಕ್ತಾಯವಾಗುವುದು, ಹೀಗೆ—

“ಹೀಗೆ ತಲೆಮಾರಿನಿಂದ, ತಲೆಮಾರಿಗೆ ದೇವತೆಗಳ ಮತ್ತು ಪಿಶಾಚಿಗಳ ಅಡಳಿತ ಮುಂದುವರಿಯುತ್ತ ಹೋಗುತ್ತದೆ.” (ಪುಟ 8)

ಬದುಕಿನ ಅಸಂಖ್ಯ, ಅಪಾರ ಅನುಭವಗಳಲ್ಲಿ—ನಿರ್ದಿಷ್ಟ ಗುರಿ, ಪರಿಣಾಮ, ಆದರ್ಶಗಳ ಹಿನ್ನೆಲೆಯಲ್ಲಿ—ಆಯ್ಕೆ, ಸಂಯೋಜನೆ, ಕ್ರೋಢಿಕರಣ ಮಾಡುವುದು ತುಂಬ ಕ್ಲಿಷ್ಟಕರವಾದುದು, ಜವಾಬ್ದಾರಿಯುತವಾದುದು. ಸಿ.ಪಿ.ಐ.(ಎಂ.) ಪಾರ್ಟಿ ಸೆಕ್ರೆಟರಿ ಇ. ಎಂ. ಎಸ್. ತಮ್ಮ ಆತ್ಮಕಥೆಯಲ್ಲಿ ಈ ಕೆಲಸವನ್ನು ಚೆನ್ನಾಗಿ ಸಾಧಿಸಿದ್ದಾರೆ. ಒಬ್ಬ ಅತಿ ಸಂಪ್ರದಾಯವಾದಿ ಬ್ರಾಹ್ಮಣ ಹುಡುಗ ತನ್ನ ಬದುಕಿಗೆ, ಸುತ್ತಲ ಪರಿಸರ ಆ ಪ್ರಪಂಚದ ಆಗುಹೋಗುಗಳಿಗೆ, ಉದಾರವಾಗಿ, ಮುಕ್ತವಾಗಿ ಬುದ್ಧಿವಂತಿಕೆಯಿಂದ, ಉದ್ದೇಶದಿಂದ, ತೆರೆದಿಟ್ಟ ಹೃದಯದಿಂದ ಹೇಗೆ ವೈಚಾರಿಕವಾಗಿ,. ಕ್ರಾಂತಿಕಾರಕವಾಗಿ, ಐತಿಹಾಸಿಕ ಅನಿವಾರ್ಯ ಅಗತ್ಯದ ವೈಜ್ಞಾನಿಕ ಬದ್ಧತೆಯಾಗಿ ರೂಪುಗೊಳ್ಳುತ್ತಾನೆಂಬ ಅದ್ಭುತ ಘಟನೆ ಪ್ರಸ್ತುತ ಗ್ರಂಥದ ವಸ್ತು.

ನನ್ನ ಪ್ರತಿಯೊಂದು ಹೇಳಿಕೆಗೂ ಗ್ರಂಥದ ಅಮೂಲ್ಯ ಬರಹದ ದೀರ್ಘ ಉದ್ಧರಣೆ, (quotation) ಕೊಡುವುದು ಲೇಖನ ವ್ಯಾಪ್ತಿಗೆ ಮೀರುವುದು.

ನಮ್ಮ ದೇಶದ ವರ್ಗ ಶೋಷಣೆಯ ಒಟ್ಟು ಪರಂಪರೆಯ ಹಿನ್ನೆಲೆಯಲ್ಲಿ ಇ. ಎಂ ಎಸ್. ವರ್ಣಿಸುವ ತಂಬುರಾನ್ ಆಳ್ವಿಕೆ, ರಾಜಶಾಹಿ, ಪುರೋಹಿತಶಾಹಿ ಮಾಡುತ್ತ ಬಂದ (ಮನು ಮುಂತಾದವರು ಹೇಳಿದ ಕಾನೂನು ಕಟ್ಟಳೆಗಳ ಹಿನ್ನೆಲೆಯಲ್ಲೂ) ಕ್ರೂರ ಅಮಾನುಷ ಶೋಷಕ ಚಿತ್ರ ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ. ಇದೆಲ್ಲವೂ ಕೃತಕವಾದ, ಉದ್ದೇಶಪೂರ್ವಕವಾದ ಒತ್ತಾಯದ ಬರವಣಿಗೆಯಾಗಿ ಬಂದಿಲ್ಲ.

ಬಾಲವಿಧವೆಯರ ಶೋಷಣೆಗೆ ಉದಾಹರಣೆಯಾಗಿ ಎಪ್ಪತ್ತು ವರ್ಷಗಳಿಂದಲೂ ವಿಧವೆಯಾಗಿ ಬಾಳಿದ ‘ಪಾಯಸ ಕೊಡುವ’ ತಮ್ಮ ಒಬ್ಬ ದೊಡ್ಡಜ್ಜಿಯ ಬಗ್ಗೆ ಇ. ಎಂ. ಎಸ್. “ಹೆಂಡತಿಯಾಗೂ, ತಾಯಿಯಾಗೂ ಆಗಬೇಕಾಗಿದ್ದ, ಅವಧಿಗಳಲ್ಲಿ ಯಾವುದೊಬ್ಬ ಹೆಂಗಸಿಗೂ ಉಂಟಾಗುವ ಸ್ವಾಭಾವಿಕ ಬೆಳವಣಿಗೆಗಳು ಆಕೆಗೆ ಆಗಲೇ ಇಲ್ಲ. ಆದರೆ ಈ ನಷ್ಟ ಅವರಿಗೆ ಮತ್ತೊಂದು ದಿಕ್ಕಿನಲ್ಲೂ ಇಲ್ಲದಾಯಿತು. ತಾನೊಬ್ಬ ಬಾಲವಿಧವೆಯಾದಾಗಲಿಂದ ಸಾಯುವವರೆಗೂ ಗಂಡನ ಮನೆಯಲ್ಲೇ ಜೀವಿಸಿಕೊಂಡು ಅಲ್ಲಿರುವ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು ಪ್ರೀತಿಸಿಕೊಂಡು, ಅವರ ಸೇವೆ ಸುಶ್ರೂಷೆಗಳನ್ನು ಮಾಡಿಕೊಂಡಿರುವುದೇ ತಮ್ಮ ಕರ್ತವ್ಯವೆಂದು ಅಂಗೀಕರಿಸಿಬಿಟ್ಟಿದ್ದರು ...” (ಪುಟ 29) ಇದನ್ನು ಓದುತ್ತಿರುವಾಗ ಕಂಠ ತುಂಬಿರುತ್ತದೆ. ಒಬ್ಬ ಬ್ರಾಹ್ಮಣ ತನ್ನನ್ನು ಹಲವು ಹೆಂಗಸರಿಗೆ ಹಂಚಿಕೊಳ್ಳುವುದರ ಮೂಲಕ (ಹಿಂದೆ ರಾಜರು ಹಾಗೆ) ತಾನು ಅ(ಸ) ಕಾಲದಲ್ಲಿ ಸತ್ತೂ ಅವರೆಲ್ಲರ ಆಶೆ-ಆಶಯಗಳನ್ನು ಬೂದಿ ಮಾಡಿ ಜೀವನವಿಡಿ ವೈಧವ್ಯವನ್ನು ಕರುಣಿಸುವ (!)ದು, ಜಾತಿ ಪ್ರತಿಷ್ಠೆ, ಘನತೆಯ ಒಳಗಡೆ ಈ ಹೆಂಗಸರು ತಮ್ಮ ನಡವಳಿಕೆಗೆ ಯಾವ ವೈಯಕ್ತಿಕ ಸ್ಥಾನ ತಂದುಕೊಳ್ಳದೆ ಕ್ರೂರ ಶೋಷಿತ ಬದುಕಿನ ಒಳಗಡೆಗೆ ಅರಳಿಕೊಳ್ಳಲು(!), ಅಲ್ಲಿಯೆ ಮೌಲಿಕವಾಗಿ ಬದುಕಲು ಸಾಧ್ಯವಾದ ಭೀಕರ ವಾಸ್ತವ ಕಣ್ಣು ಕುಕ್ಕುವದು. ಇದಕ್ಕೆ ಸಾಕ್ಷಿಯಾಗಿ 29, ೩೦ ಪುಟಗಳನ್ನು ವಿಶೇಷವಾಗಿ ಗಮನಿಸಬಹುದು.

‘ಹಿಂದೆ ಸ್ವಜಾತಿಯ ಹೆಂಡತಿ ಮಾತ್ರ ಇರುವಂಥ ನಂಬೂದಿರಿ ಆ ಕಾಲದಲ್ಲಿ ದುರ್ಲಭನಾಗಿದ್ದ, ಎರಡೂ, ಮೂರೂ ಹೆಂಡತಿಯರು ಇದ್ದಂಥವರೆ ಹೆಚ್ಚಾಗಿದ್ದರು,’ (ಪುಟ 30) “ಮಗಳನ್ನು ಧಾರೆಯೆರೆದು ಕೊಡಬೇಕಾದರೆ ತಂದೆಯಾದವನು ತಾನೆ ಎರಡನೆಯದೊ, ಮೂರನೆಯದೋ ಮದುವೆ ಮಾಡಿಕೊಳ್ಳಬೇಕಾದ ಸಂಪ್ರದಾಯ” (ಪುಟ 31)...

ಮನೆಯ ಹಿರಿಯ ಸೋದರ ಮಾತ್ರ ಸ್ವಜಾತಿ ಮದುವೆ, ಕಿರಿಯರೆಲ್ಲ ಬೇರೆ ಜಾತಿಯ ಹೆಣ್ಣುಗಳನ್ನು ಲಗ್ನ ಮಾಡಿಕೊಳ್ಳಬೇಕಿದ್ದ (ಪುಟ 32) ಈ ಬ್ರಾಹ್ಮಣ ಸಮಾಜದ ಪೂರ್ವಕಾಲದ ಅವಶೇಷಗಳ ಕೊನೆಯುಸಿರನ್ನು ನಾನಾ ಸುಧಾರಣಾ ಚಳುವಳಿಗಳ ಮೂಲಕ ಸಮಾಧಿ ಮಾಡಿದ ಚರಿತ್ರೆ “ನನ್ನ ಬದುಕಿ”ನ ತುಂಬ ಸೇರಿಕೊಂಡಿದೆ.

ಮೇಲ್ಜಾತಿಯವರಿಗಿದ್ದ ಸವಲತ್ತುಗಳು, ಅವರ ಸಮಾಜವನ್ನು ಅಮಾನವೀಯ ಪದ್ಧತಿಗಳಿಗೆ ತಳ್ಳಿ ಭೀಬತ್ಸಗೊಳಿಸಿತ್ತೆಂಬುದನ್ನೂ, ಸ್ತ್ರೀ ಶೋಷಣೆಯ ಕಥಾನಕ (ಪುಟ 27, 36) ಓದುಗನ ಮನಸ್ಸನ್ನು ದುಗುಡ, ಅನುಕಂಪೆಯ ಹಸಿಯಲ್ಲಿ ಅದ್ದಿ ತೆಗೆಯುತ್ತದೆ.

“ಜಾತಿಯಲ್ಲಿ ಅತಿ ಮೇಲಿನ ಸ್ಥಾನವನ್ನು ಪಡೆದು ನಿಲ್ಲುವದು, ಭಾರೀ ಆದಾಯ ಭತ್ತದ ಜಮೀನುಗಳು ಮುಂತಾದವನ್ನು ಗಿಟ್ಟಿಸಿಕೊಂಡು, ಜಮೀನು ಬೇಸಾಯ ಮಾಡಲು ಅಡಿಯಾಳುಗಳಾಗಿರುವ ಒಕ್ಕಲು ರೈತರುಗಳ ಸೇವೆ, ಭಕ್ತಿಗಳನ್ನು ಆರ್ಜಿಸಿಕೊಳ್ಳುವದು, ನಾಡನ್ನು ಆಳುವ ‘ತಂಬೂರಾನ್’ ಒಡೆಯರ ಆಪ್ತ ಮಿತ್ರರೆನಿಸಿಕೊಳ್ಳುವದು,—ಇವೆಲ್ಲ ಹೆಚ್ಚುಗಾರಿಕೆಗಳ ಫಲವಾಗಿ ಎಲ್ಲರಿಗೂ ಮಿಗಿಲಾದ ಎತ್ತರದ ಸ್ಥಾನದಲ್ಲಿರುವ ಮನುಷ್ಯ ವರ್ಗ ಈ ನಂಬೂದಿರಿ ಸಮಾಜ’” (ಪುಟ 35).

ತನ್ನ ಜಾತಿಯನ್ನು ಸೂಕ್ಷ್ಮವಾದ, ನಯವಾದ ಕಲೆಗಾರಿಕೆಯ ಕುಸುರಿ ಕೆಲಸದಿಂದ, ವ್ಯಂಗ್ಯವಾಗಿ ಬಿಚ್ಚಿಡುವ ಶೈಲಿಗೆ ಉದಾಹರಣೆ ಇದು. ಅದ್ಭುತ ಸಂಯಮದ ತಾರ್ಕಿಕ, ಆದರ್ಶಪ್ರಾಯ ಬರವಣಿಗೆ.

ಬ್ರಾಹ್ಮಣ ಧರ್ಮ ಶತಮಾನಗಳಿಂದ ಹಾಕುತ್ತ ಬಂದ ನಿರ್ಬಂಧಗಳು (ತಮ್ಮನ್ನು ಭೂಸುರರನ್ನಾಗಿಸಲಿಕ್ಕೆ) ತಮಗೆ ಹೇಗೆ ಪೀಡೆಯ ಸಂಕಟಗಳಾಗುತ್ತಿದ್ದವೆಂಬುದನ್ನು ವಿವರಿಸುತ್ತಾ ತಮ್ಮ ಬ್ರಹ್ಮಚರ್ಯ ಮುಗಿದ ದಿನದ ಬಗ್ಗೆ ಬರೆಯುವಾಗ ಇ. ಎಂ. ಎಸ್. ಹೇಳುತ್ತಾರೆ (ಪುಟ 36). “ಅದು ಕೊನೆ ಮುಟ್ಟುವ ದಿವಸ ನನಗೆ ಆದ ಆನಂದ ಮತ್ತು ನೆಮ್ಮದಿಯ ಭಾವ ಜೀವನದಲ್ಲಿ ಇನ್ನೊಂದು ಸಲ ಮಾತ್ರ ಆಗಿದ್ದುದು. ಯಾವಾಗೆಂದರೆ ಎಷ್ಟೋ ವರ್ಷಗಳಾದ ಮೇಲೆ ನಾನು ಕಮ್ಯುನಿಸ್ಟ್ ಪಾರ್ಟಿಯ ಕೆಲಸಗಾರನಾಗಿದ್ದಾಗ ಒಮ್ಮೆ ಕೆಲವು ಕಾಲ ಗೋಪ್ಯವಾಗಿ ಅಡಗಿಕೊಂಡಿದ್ದು ಆ ಅವಧಿ ಮುಗಿದೊಡನೆ ಮತ್ತೆ ಹೊರಗೆ ಬರಲು ಅವಕಾಶವಾದಾಗ ಮಾತ್ರ.”

ಕೇರಳದಲ್ಲಿ ಸುಧಾರಣಾವಾದಿ ಚಳುವಳಿಗಳು ಹುಟ್ಟಿ ಬಂದುದರ ಹಿನ್ನೆಲೆ, ಅದರಲ್ಲಿ ಪಾತ್ರ ವಹಿಸಿದವರ ವ್ಯಕ್ತಿಚಿತ್ರಣಗಳು, ಕೇರಳ ಸಮಾಜದ ಮೇಲೆ ಅವು ಮಾಡಿದ ಪರಿಣಾಮ, ಪ್ರಗತಿಯ ಹೆಜ್ಜೆ ಗುರುತುಗಳನ್ನು ತಮ್ಮ ಬದುಕಿನ ಜತೆಗೇನೆ ವಿಶ್ಲೇಷಿಸುತ್ತ ಹೋಗುತ್ತಾರೆ.

(6ನೇ ಪುಟವನ್ನು ನೋಡಿ)

ಲೇಖಾಂಕ–3

ಪಕ್ಷದ ೧೧ನೇ ಅಧಿವೇಶನದ ಕುರಿತು

—ವಿ.ಜೆ.ಕೆ. ನಾಯರ್

[ಕಳೆದ ಸಂಚಿಕೆಯಿಂದ]

ಹತ್ತನೇ ಅಧಿವೇಶನ ಚಿತ್ರಿಸಿದ ಎಡ ಮತ್ತು ಪ್ರಜಾಪ್ರಭುತ್ವ ರಂಗ ಒಂದು ಚುನಾವಣಾ ರಂಗವಲ್ಲ. ಅದು ವರ್ಗ ಶಕ್ತಿಗಳ ನಡುವಣ ಸಹಸಂಬಂಧದಲ್ಲಿ ಬದಲಾವಣೆ ತರುವ ಉದ್ದೇಶ ಹೊಂದಿರುವ ಒಂದು ಸಾಮೂಹಿಕ ಚಳುವಳಿ. ಕಾರ್ಮಿಕವರ್ಗ, ರೈತಾಪಿವರ್ಗ ಹಾಗೂ ದುಡಿಯುವ ಜನತೆಯ ಮೇಲೆ ನಡೆಯುತ್ತಿರುವ ಪ್ರಹಾರವನ್ನು ಎದುರಿಸುವುದಕ್ಕಾಗಿ ಈ ಚಳುವಳಿ ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧ ಪಟ್ಟಂತೆ ಸಾಮ್ರಾಜ್ಯಶಾಹಿಗೆ ಶರಣಾಗುವುದನ್ನು ತಡೆಯಲಿಕ್ಕಾಗಿ ಈ ಚಳುವಳಿ. ದೇಶದ ಐಕ್ಯತೆ ಹಾಗೂ ಸಮಗ್ರತೆಯ ರಕ್ಷಣೆಗೆ ಸಂಬಂಧಪಟ್ಟಂತೆ ಸಾಮ್ರಾಜ್ಯಶಾಹೀ ಕುತಂತ್ರಗಳಿಗೆ, ಮೋಸಗಳಿಗೆ ಬಲಿಯಾಗುವುದನ್ನು ತಡೆಯುವತ್ತ ಈ ಚಳುವಳಿ. ಜನರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಯುತ್ತಿರುವ ಪ್ರಹಾರದ ವಿರುದ್ಧವಾಗಿ ಈ ಚಳುವಳಿಯಿದೆ.

ಎಡ-ಪ್ರಜಾಪ್ರಭುತ್ವರಂಗದ ಬೆಳವಣಿಗೆ

ಹತ್ತನೇ ಅಧಿವೇಶನದ ನಂತರ ಹಾಗೂ 11ನೇ ಅಧಿವೇಶನದ ಮೊದಲು ಕಂಡುಬಂದ ಸಾಮೂಹಿಕ ಚಳುವಳಿಗಳು ಈ ಚಳುವಳಿಯ ಅಂಗಗಳೇ ಆಗಿವೆ. ರೈತರು, ಯುವಜನರು, ವಿದ್ಯಾರ್ಥಿಗಳು ಮೊದಲಾದವರ ವ್ಯಾಪಕ ಸಾಮೂಹಿಕ ಕಾರ್ಯಾಚರಣೆಗಳೂ ಈ ಚಳುವಳಿಯ ಅಂಗಗಳೇ ಆಗಿವೆ. ದೇಶಾದ್ಯಂತ ಸುಯೋಗ್ಯ ಬೆಲೆಗಾಗಿ ನಡೆದ ರೈತರ ಚಳುವಳಿಯನ್ನು ನಾವು ಪ್ರಜ್ಞಾಪೂರ್ವಕವಾಗಿ ಬೆಂಬಲಿಸಿದೆವು. ಈ ಚಳುವಳಿ ಬೂರ್ಜ್ವಾ ಸಂಘಟನೆಗಳೊಳಗೇ ಸೀಮಿತವಾಗದಿರಲೆಂದು ನಾವು ಮಧ್ಯ ಪ್ರವೇಶಿಸಿದೆವು. ಹಲವು ಕಡೆ ಈ ರೈತ ಚಳುವಳಿಯ ಸಂಘಟನೆಗಳು ಹಳ್ಳಿ Vs ಪಟ್ಟಣ ಇತ್ಯಾದಿ ತಪ್ಪು ಘೋಷಣೆಗಳ ಮೂಲಕ ತಮ್ಮ ಚಳುವಳಿಯನ್ನು ಕಾಮಿಕವರ್ಗದ ವಿರುದ್ಧ ನಡೆಸಲು ಪ್ರಯತ್ನಿಸಿದರು. ನಮಗಿದ್ದ ಸರಿಯಾದ ದೃಷ್ಟಿಕೋನದಿಂದಾಗಿ ತಾನಾಗಿಯೇ ಹುಟ್ಟಿಕೊಂಡ ಈ ರೈತ ಚಳವಳಿ ಕಾರ್ಮಿಕ ವರ್ಗ ವಿರೋಧೀ ನಿಲುವು ತಳೆಯದಂತೆ ತಡೆದೆವು. ಇದರಿಂದ ರೈತರ ಹೋರಾಟಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕವರ್ಗ ಮಧ್ಯ ಪ್ರವೇಶಿಸಲು ಸಾಧ್ಯವಾಯಿತು. ಈ ಎರಡೂ ವರ್ಗಗಳ ಪ್ರಜ್ಞೆ ಹಾಗೂ ಸಂಘಟನೆಗಳಲ್ಲಿ ಪರಿವರ್ತನೆ ತಂದು ಅದರಲ್ಲಿ ಐಕ್ಯತೆ ಮೂಡಿಸಲು ನಮಗೆ ಸಾಧ್ಯವಾಯಿತು. ಮಾರ್ಚ್ 26 ರ ಕಿಸಾನ ರ್‍ಯಾಲಿ ಹಾಗೂ ಮುಂಬೈಯಲ್ಲಿ ಜೂನ್ 4ರ ಸಮಾವೇಶದಲ್ಲಿ ಕಾರ್ಮಿಕ ಸಂಘಗಳು ರೈತಾಪಿವರ್ಗದ ಪರವಾಗಿ ಕೊಟ್ಟ ಕರೆ ಇವೆರಡೂ ಇದೇ ದಿಕ್ಕಿನಲ್ಲಿನ ಸಾಧನೆಗಳು.

ಎಂಟು ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ 40 ಕೈಗಾರಿಕಾ ಮಹಾ ಸಂಘಗಳು ಭಾಗವಹಿಸಿದ್ದ ಜೂನ್ 4ರ ಸಮಾವೇಶ, ನವಂಬರ್ 23 ರ ರ್‍ಯಾಲಿ ಹಾಗೂ ಜನವರಿ 19 ರ ಸಾರ್ವತ್ರಿಕ ಮುಷ್ಕರ ಇವೆಲ್ಲಾ ಮೂಡಿ ಬರುತ್ತಿರುವ ಪರಿವರ್ತನೆಗಳಲ್ಲಿ ಸಕಾರಾತ್ಮಕ ಬೆಳವಣಿಗೆಗಳೇ ಸರಿ.

ಇದೇ ರೀತಿ ಸೆಪ್ಟಂಬರ್ 15 ರಂದು ವಿವಿಧ ಸಂಘಟನೆಗಳ ವಿದ್ಯಾರ್ಥಿ ಹಾಗೂ ರಾಜ್ಯ ಮಟ್ಟದಲ್ಲಿನ ರಾಜಕೀಯ ಚಳುವಳಿಗಳು, ಆಂದೋಲನಗಳು ಹಾಗೂ ಇವೆಲ್ಲರ ಮಿಗಿಲಾಗಿ ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದೀ ಸರಕಾರಗಳು ಮೂಡಿ ಬಂದದ್ದು, ಅವರ ಕಾರ್ಯಕ್ರಮ, ಅದನ್ನು ಕಾರ್ಯಗತಗೊಳಿಸಿದ್ದು, ಈ ಸರ್ಕಾರಗಳ ರಕ್ಷಣೆಗಾಗಿ ಹೋರಾಟ ಇವೆಲ್ಲ ಈ ಚಳುವಳಿಯ ವಿಭಿನ್ನ ಅಂಗಗಳು.

ಪರ್ಯಾಯ ಧೋರಣೆಗಳು

ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳು ಆಳುವ ಪಕ್ಷಗಳು ಅನುಸರಿಸುವ ಧೋರಣೆಗಳಿಗೆ ವ್ಯತಿರಿಕ್ತವಾಗಿ ವಸ್ತುತಃ ಎಡಪಂಥೀಯ ನಿಲುವುಳ್ಳದ್ದು. ಈ ಕಾರ್ಯಕ್ರಮಗಳು ಆಳುವ ವರ್ಗಗಳು ಅನಿವಾರ್ಯವಾಗಿ ಅನುಸರಿಸುತ್ತಿರುವ ಸರ್ವಾಧಿಕಾರೀ ಪಥಕ್ಕೆ ವಿರುದ್ಧವಾಗಿದ್ದು ಪ್ರಜಾಸತ್ತಾತ್ಮಕವಾಗಿವೆ.

ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಒಂದು ಚುನಾವಣಾ ರಂಗವಾಗಿ ಕಲ್ಪಿಸಲಾಗಿಲ್ಲ. ಇದರ ಕಾರ್ಯಕ್ರಮಗಳ ಪರವಾಗಿರುವವರು ಅದರ ಚಟುವಟಿಕೆಗಳಲ್ಲಿ ಭಾಗವಹಿಸಬಹುದು. ಯಾವುದೇ ಒಂದು ಪಕ್ಷ ಆಳುವ ವರ್ಗ ಧೋರಣೆಗಳನ್ನು ಎಲ್ಲಿಯವರೆಗೆ ವಿರೋಧಿಸುತ್ತದೋ ಆ ಮಿತಿಯವರೆಗೆ ಮಾತ್ರ ಅದನ್ನು ಎಡ ಅಥವಾ ಪ್ರಜಾಪ್ರಭುತ್ವವಾದಿ ಎನ್ನುವುದು ಸರಿಯಾದೀತು. ಆಳುವ ಪಕ್ಷಗಳ ನಡುವಿನ ಭಿನ್ನಾಭಿಪ್ರಾಯ ಹಾಗೂ ತಿಕ್ಕಾಟಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಅದು ಎಷ್ಟೇ ಎಡವಿದರೂ, ಹಿಂಜರಿತ ಕಂಡರೂ, ಎಷ್ಟೇ ತಾತ್ಕಾಲಿಕವಾಗಿಯಾದರೂ ಅದನ್ನು ನಮ್ಮ ಮಿತ್ರನನ್ನಾಗಿ ಮಾಡಿಕೊಳ್ಳುವುದು ನಮ್ಮ ಉದ್ದೇಶವಾಗಿರಬೇಕು.

ಕನಿಷ್ಟ ಕಾರ್ಯಕ್ರಮ ಹಾಕಿಕೊಂಡು ಅಸ್ತಿತ್ವಕ್ಕೆ ಬಂದ ಪಶ್ಚಿಮ ಬಂಗಾಲ, ತ್ರಿಪುರಾ ಹಾಗೂ ಕೇರಳ ಸರ್ಕಾರಗಳು ಈ ಚಳುವಳಿಯ ವಿಭಿನ್ನ ಅಂಗಗಳು. ಎಡ ಪ್ರಜಾಪ್ರಭುತ್ವ ರಂಗದ ಯೋಜನೆಯಲ್ಲಿ ಒಂದು ರಾಜ್ಯದಲ್ಲಿ ಯಾವುದೇ ಒಂದು ಸಂಯುಕ್ತ ರಂಗದ ತಾತ್ಕಾಲಿಕ ಗೆಲುವು ಅಥವಾ ಸೋಲು ನಿರ್ಧಾರಕ ಅಂಶವಾಗುವುದಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಮೂಡಿಬರುತ್ತಿರುವ ಈ ಸಂಯುಕ್ತರಂಗಗಳು ಬೇರೆ ಬೇರೆ ಹೆಸರನ್ನು ಹೊಂದಿರಬಹುದು. 11ನೇ ಅಧಿವೇಶನದ ಪರಿಕಲ್ಪನೆಯಾದ ಎಡ-ಪ್ರಜಾಪ್ರಭುತ್ವರಂಗದ ಮೌಲ್ಯಮಾಪನವನ್ನು ಬೇರೆ ಬೇರೆ ಸಂಯುಕ್ತರಂಗಗಳ ಹೋಲಿಕೆಯ ಆಧಾರದ ಮೇಲೆ ಮಾಡಬಾರದು.

ಸಾಧನೆಗಳು

ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದ ಸರಕಾರಗಳು ಎಲ್ಲಾ ಪ್ರತಿಕೂಲ ಪರಿಸ್ಥಿತಿ ಎದುರಿಸಿ ಐದು ವರ್ಷಗಳನ್ನು ಪೂರ್ಣಗೊಳಿಸಲು ಸಾಧ್ಯವಾಯಿತೆಂಬ ಅಂಶವೇ ನಮ್ಮ ಪಕ್ಷ ಅಂಗೀಕರಿಸಿದ ಎಡ ಪ್ರಜಾಪ್ರಭುತ್ವ ರಂಗದ ಯಶಸ್ಸನ್ನು ತೋರಿಸಿಕೊಟ್ಟಿದೆ. ಶ್ರೀಮತಿ ಇಂದಿರಾ ಗಾಂಧಿಯವರು 1977ರ ಸಂಸದೀಯ ಚುನಾವಣೆಗಳಲ್ಲಿ ಸೋತನಂತರವೇ ಈ ಸರಕಾರ ರಚನೆಗೊಳ್ಳಲು ಸಾಧ್ಯವಾಯಿತು. ಆಕೆ ಪ್ರಧಾನ ಮಂತ್ರಿ ಪದವಿಯನ್ನು ಮತ್ತೆ ಗಳಿಸಿಕೊಂಡನಂತರವೂ 1980ರ ಕೇರಳ ವಿಧಾನ ಸಭಾ ಚುನಾವಣೆಗಳು ಆಕೆಯ ಪರವಾಗಿರಲಿಲ್ಲ. 1980ರಲ್ಲಿ ಅಧಿಕಾರಕ್ಕೆ ಹಿಂದಿರುಗಿದ ನಂತರ ಎಷ್ಟೇ ಬೆದರಿಕೆ ಹಾಕಿದರೂ ಪಶ್ಚಿಮ ಬಂಗಾಳ, ತ್ರಿಪುರಾ ಸರಕಾರಗಳನ್ನು ಉರುಳಿಸುವುದು ಆಕೆಗಾಗಲಿಲ್ಲ. ಕೇರಳದಲ್ಲಿ ಈ ಉರುಳಿಸುವ ಆಟ ಯಶಸ್ವಿಯಾಗಬೇಕಾದರೆ ಅದಕ್ಕಾಗಿ ಆಕೆ ಸಾಕಷ್ಟು ಬೆಲೆ ತೆರಬೇಕಾಯಿತು. ಕೇರಳದ ಸಂಯುಕ್ತ ರಂಗ ಮತ್ತೆ ಜಯಶಾಲಿಯಾಗಿ, ಇನ್ನಷ್ಟು ಬಲಶಾಲಿಯಾಗಿ ಮೂಡಿಬರುವುದು ಖಂಡಿತ. 10ನೇ ಅಧಿವೇಶನ ಪರಿಕಲ್ಪಿಸಿ 11ನೇ ಅಧಿವೇಶನದ ಪರಿಶೀಲನೆಯಲ್ಲಿ ಸರಿಯಾದ ದಾರಿಯೆಂದು ನಿರ್ಧಾರವಾದ ಎಡ-ಪ್ರಜಾಪ್ರಭುತ್ವ ರಂಗ ಆಳುವ ವರ್ಗಗಳು ಅನುಸರಿಸುತ್ತಿರುವ ಧೋರಣೆಗಳಿಗೆ ವಿರುದ್ಧವಾಗಿವೆಯೆಂಬ ವಾಸ್ತವಾಂಶ ಗಮನಿಸಿದರೆ ನಮ್ಮ ಪಕ್ಷ ಯಾವುದೇ ಪಕ್ಷದ ಬಾಲಂಗೋಚಿಯಾಗಲಿಲ್ಲ ಅಥವಾ ಕೆಲವು ಪತ್ರಿಕೆಗಳು ಭವಿಷ್ಯ ನುಡಿದಂತೆ ಸಾಮ್ರಾಜ್ಞಿಯ ವಿಧೇಯ 'ಪ್ರತಿ ಪಕ್ಷ' ವಾಗಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕಾಂಗ್ರೆಸ್ (ಎಸ್)ನ ರಾಷ್ಟ್ರೀಯ ಕಾರ್ಯಕಾರಿಣಿ ಮೊದಲು ತಳೆದ ದೃಢ ನಿಲುವು, ನಂತರ ಜನತಾ ಪಕ್ಷವೂ ತಳೆದ ಇಂತಹ ನಿಲುವು ಹಾಗೂ ಬೇರೆ ಯಾವುದೇ ರಾಷ್ಟ್ರೀಯ ಪಕ್ಷ ಇಂದಿರಾ ಗಾಂಧಿಯವರ ಆಟಗಳಿಗೆ ಸಿಲುಕಲು ನಿರಾಕರಿಸಿರುವುದು, ಇವೆಲ್ಲಾ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕಟ್ಟನ್ನು ತೋರಿಸಿ ಕೊಡುತ್ತಿವೆ. ಅಲ್ಲದೆ ಇತರ ಶಕ್ತಿಗಳ ನಡುವೆಯೂ ಸರ್ವಾಧಿಕಾರದ ವಿರುದ್ಧ ವಿಶಾಲ ಆಧಾರವುಳ್ಳ ಪ್ರತಿರೋಧ ಮೂಡಿ ಬರುತ್ತಿದೆ ಎಂಬುದೂ ಇದರಿಂದ ತಿಳಿಯುತ್ತದೆ. ಸರ್ವಾಧಿಕಾರದ ವಿರುದ್ಧ ಹೋರಾಟದ ಈ ಪರಿಕಲ್ಪನೆಯನ್ನೂ ಜಲಂಧರ್ ಅಧಿವೇಶನದಲ್ಲಿ ಪ್ರತಿಪಾದಿಸಲಾಗಿತ್ತು. 11ನೇ ಅಧಿವೇಶನ ಅದನ್ನು ಪುನರ್ ಪ್ರತಿಪಾದಿಸಿದೆ. ಈ ಬಗ್ಗೆ ಮುಂದಿನ ಲೇಖನದಲ್ಲಿ ಪರಿಶೀಲಿಸಲಾಗುವುದು.

ಮಂಗಳೂರು :

ಆಟೋ ಚಾಲಕ ಸಂಘದ ವಾರ್ಷಿಕ ಸಭೆ

18.3.82 ರಂದು ದ. ಕ. ಜಿಲ್ಲಾ ಆಟೋ ಚಾಲಕರ ಸಂಘದ ವಾರ್ಷಿಕ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕಾಂ। ಪಿ. ರಾಮಚಂದ್ರರಾವ್ ವಹಿಸಿದ್ದರು.

ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಮಾಧವಶೆಟ್ಟಿ ಚಟುವಟಿಕೆಗಳ ವರದಿಯನ್ನಿತ್ತರು.

ನೂತನ ಸಾಲಿಗೆ ಈ ಕೆಳಕಂಡವರನ್ನು ಸಂಘದ ಪದಾದಿಕಾರಿಗಳನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಕಾಂ। ಪಿ. ರಾಮಚಂದ್ರರಾವ್, ಕೆ. ಅಬೂಬಕರ್ ಮತ್ತು ಎಂ. ಕೆ. ಚಂದ್ರಪ್ಪ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಯಾಗಿ ತೋಕಯ್ಯಶೆಟ್ಟಿ, ನಾಭಿರಾಜ್ ಮತ್ತು ನಾರಾಯಣ ನಾಯರ್ ಜೊತೆ ಕಾರ್ಯದರ್ಶಿಗಳಾಗಿ ಮತ್ತು ಕೋಶಾಧಿಕಾರಿಯಾಗಿ ಕೆ. ರಾಜೇಂದ್ರ ಆಡ್ಯಾಂತಯ ಇವರುಗಳು ಚುನಾಯಿತರಾಗಿದ್ದಾರೆ.

ಕರ್ನಾಟಕ ರಾಜ್ಯ ಬೀಡಿ ಮಜೂರರ

ಎರಡನೇ ಸಮ್ಮೇಳನಕ್ಕೆ ಸಿದ್ಧತೆ

ಸಿ.ಐ.ಟಿ.ಯು. ನೇತೃತ್ವದ ಬೀಡಿ ಮಜೂರರ ಎರಡನೇ ರಾಜ್ಯ ಸಮ್ಮೇಳನವನ್ನು ಬಂಟ್ವಾಳದಲ್ಲಿ ಜರಗಿಸಬೇಕೆಂದು ರಾಜ್ಯ ಸಿ.ಐ.ಟಿ.ಯು. ವಿನ ತೀರ್ಮಾನವನ್ನು 23-3-82ರಂದು ಬಂಟ್ವಾಳದಲ್ಲಿ ಸೇರಿದ ಜಿಲ್ಲೆಯ ಬೀಡಿ ಮಜೂರರ ವಿಸ್ತ್ರತ ಸಭೆಯು ಸ್ವಾಗತಿಸಿತು. ಸಭೆಯ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಸಿ. ಐ. ಟಿ.ಯು. ಸಮಿತಿಯ ಜೊತೆ ಕಾರ್ಯದರ್ಶಿ ಕಾ। ಯು. ಬಿ. ಲೋಕಯ್ಯ ಜರಗಿಸಲು ಬೇಕಾದ ಸಿದ್ಧತೆಯನ್ನು ಸಭೆಯಲ್ಲಿ ಚರ್ಚಿಸಿದರು. ಕಾ। ಕೆ. ಮೂಸಬ್ಬನವರು ಅಧ್ಯಕ್ಷರಾಗಿಯೂ ಕಾ। ವಾಸು ಗಟ್ಟಿಯವರು ಕಾರ್ಯದರ್ಶಿಯಾಗಿಯು ಇರುವ 107 ಮಂದಿಯ ಸ್ವಾಗತ ಸಮಿತಿಯನ್ನು ರಚಿಸಲಾಯಿತು. 25-4-82ರಂದು ಸಮ್ಮೇಳನದ ಅಂಗವಾಗಿ ಬಹಿರಂಗ ಸಭೆಯನ್ನು ಜರಗಿಸಲು ತೀರ್ಮಾನಿಸಲಾಯಿತು. ಕಾಂ। ಸಂಜೀವಬಂಗೇರ, ಕಾಂ। ಬಾಬು ದೇವಾಡಿಗ, ಕಾಂ। ಜೆ. ವೀರಪ್ಪ, ಕಾಂ। ಹೊನ್ನಯ್ಯ ಮತ್ತು ಕಾಂ। ವೆಂಕಪ್ಪ ಶೆಟ್ಟಿ ಮೊದಲಾದವರು ಸಭೆಯಲ್ಲಿ ಸಮ್ಮೇಳನ ಯಶಸ್ವಿ ಮಾಡುವ ಬಗ್ಗೆ ಸಲಹೆ ಸೂಚನೆಯನ್ನು ನೀಡಿದರು.

ದಲಿತರ ಮೇಲೆ ನಡೆದ ಹಲ್ಲೆಯ ಖಂಡನೆ

ರಾಷ್ಟ್ರದಾದ್ಯಂತ ದಲಿತರ ಮೇಲೆ ನಡೆಯುತ್ತಿರುವ ಅಮಾನವೀಯ ದಾಳಿಗಳನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿಯವರು ಮಂತ್ರಿಗಳ, ಶಾಸಕರ ಮನೆಗಳ ಎದುರು ಧರಣಿ ಸತ್ಯಾಗ್ರಹ ಕೈಗೊಂಡಿದ್ದರು.

ಕೆ.ಜಿ.ಎಫ್. ನ ಶಾಸಕ ಸಿ. ಎಂ. ಆರ್ಮುಗಂ ರ ಮನೆ ಎದುರು ಧರಣಿ ಸತ್ಯಾಗ್ರಹಿಗಳ ಮೇಲೆ ಸಿ. ಎಂ. ಆರ್ಮುಗ್ಗಂರ ಬಾಡಿಗೆ ಗೂಂಡಾಗಳು ದಾಳಿ ಮಾಡಿದ್ದಾರೆ.

ಈ ದಾಳಿಯನ್ನು ಕೆ. ಜಿ. ಎಫ್. ನ ಬಿ. ಜಿ. ಎಂ. ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ತೀವ್ರವಾಗಿ ಖಂಡಿಸಿದೆ. ದಲಿತರ ಓಟುಗಳಿಂದಲೇ ಚುನಾಯಿತರಾಗಿ, ಅವರ ಮೇಲೆ ದಾಳಿಮಾಡಿರುವುದು ಆರ್ಮುಗಂ ಹಿತಾಸಕ್ತಿ ಏನು ? ಎಂಬುದನ್ನು ಎತ್ತಿ ತೋರಿಸುತ್ತದೆ ಎಂದು ಯೂನಿಯನ್ ಪದಾಧಿಕಾರಿಗಳು ಹೊರಡಿಸಿದ ಹೇಳಿಕೆ ತಿಳಿಸಿದೆ.

ಸಾಗರ :

ಹೋರಾಟನಿರತ ಕಾರ್ಮಿಕರ ಮೇಲೆ ಹಲ್ಲೆ

ಸಾಗರದ ಹಮಾಲರು ಮತ್ತು ದಲಿತ ಕೂಲಿ ಕಾರ್ಮಿಕರ ಸಂಘವು ಕಾರ್ಮಿಕರ ಕೆಲವು ಬೇಡಿಕೆಗಳನ್ನಿಟ್ಟು ಹೋರಾಟದಲ್ಲಿದ್ದಾರೆ.

ಮಾಲೀಕರ ಪರ ಗೂಂಡಾಗಳು ಈ ಹೋರಾಟ ನಿರತ ಮಹಿಳಾ ಕಾರ್ಮಿಕರು, ಹಮಾಲಿ ಕಾರ್ಮಿಕರು ಹಾಗೂ ಸಂಘದ ಅಧ್ಯಕ್ಷ ಎಸ್. ಎಸ್. ನಾಗರಾಜ್‌ರ ಮೇಲೆ ಹಲ್ಲೆ ನಡೆಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿವಮೊಗ್ಗಾ ನಗರ ಸಮಿತಿಯ ಕಾರ್ಯದರ್ಶಿ ಕಾಂ। ಎಸ್. ಬಿ. ಶಿವಶಂಕರ್ ಮತ್ತು ಶಿವಮೊಗ್ಗದ ಅಕ್ಕಿ ಗಿರಣಿ ಮತ್ತು ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ। ತಿರುಕಪ್ಪ ಅವರು ತೀವ್ರವಾಗಿ ಖಂಡಿಸಿ, ಎಲ್ಲ ಪ್ರಗತಿಪರರು ಹೋರಾಟವನ್ನು ಬೆಂಬಲಿಸಬೇಕೆಂದು ಕೋರಿದ್ದಾರೆ.

ಇ. ಎಂ. ಎಸ್. ಅವರ "ನನ್ನ ಬದುಕು" —ಕೆಲವು ಅನಿಸಿಕೆಗಳು

(4 ನೆಯ ಪುಟದಿಂದ)

ಇಂಗ್ಲೀಷಿನಿಂದಾಗಬಹುದಾದ ಲೌಕಿಕ ಲಾಭವನ್ನೂ ಮುಂಘೋರಣೆಯಿಂದ ಅರಿತುಕೊಂಡ ಈ ದೇಶದ ಬುದ್ಧಿವಂತ ಬ್ರಾಹ್ಮಣರು, ಮ್ಲೇಚ್ಛ ಭಾಷೆಯೆಂದು ಸ್ವಮತಾಂಧ ದಿಮಾಕು ತೋರಿಸಿಕೊಂಡರೂ ಆ ಕಡೆ ಮನಸ್ಸು ಮಾಡುವ ಬೆಳವಣಿಗೆಯ ಘಟ್ಟಗಳನ್ನು "ಹೊಸ ಚಲನೆ" ಭಾಗದಲ್ಲಿ ಬಿಂಬಿಸಿದ್ದಾರೆ.

ನಿರ್ಲಿಪ್ತ, ಪ್ರೌಢವಾದ, ಪರಿಪಕ್ವ ಅಧಿಕಾರವಾಣಿಯಲ್ಲಿ ಇ. ಎಂ. ಎಸ್. ಕಟುವಾಸ್ತವದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತ ಮಹಾಕಾವ್ಯ ಮಟ್ಟಕ್ಕೆ ಒಯ್ಯುತ್ತಾರೆ 'ನನ್ನ ಬದುಕ'ನ್ನು.

ಕೇರಳದ ಮಹಾ ಬ್ರಾಹ್ಮಣರು ಸ್ವತಂತ್ರ ಹೋರಾಟದಲ್ಲಿ ಭಾಗಿಯಾಗುವುದರ ಹಿಂದಿರುವ ಸೂಕ್ಷ್ಮ ಸ್ವಾರ್ಥ ತರ್ಕವನ್ನೂ ನಿರ್ಭಿಡೆಯಿಂದ 'ಖಿಲಾಫತ್ತು' ಭಾಗದಲ್ಲಿ ವಿವರಿಸುತ್ತಾರೆ. ಈ ಜಾತಿಗೆ ಬಿದ್ದ ಆಧುನಿಕತೆಯ ಪೆಟ್ಟುಗಳಿಂದ ಬಂದ ದ್ವಂದ್ವಾತ್ಮಕ ವಿರೋಧಗಳನ್ನು ಗುರುತಿಸುತ್ತಾರೆ.

ಖಿಲಾಫತ್ ಚಳುವಳಿಯ ಅಲೆಗಳು ತಮ್ಮ ಕುಟುಂಬಕ್ಕೆ, ನಾಡಿಗೆ ತಾಕಿದ ರೀತಿಯನ್ನೂ ಸ್ವತಂತ್ರ ಹೋರಾಟದ ಒಂದು ಅಂಗವಾಗಿ ಬೆಳೆದು ಬಂದರೂ ಅದರ ಜತೆಗೆ ಬಂದ ಅನಾಹುತವನ್ನೂ ವಿವೇಚಿಸುತ್ತಾರೆ. ಒಟ್ಟಾರೆ ಇ. ಎಂ. ಎಸ್. ತಮ್ಮ ಬದುಕಿನ ಮಹತ್ವದ ಅಂಗವಾದ ರಾಜಕೀಯಕ್ಕೆ ವಿಶೇಷ ಒತ್ತುಕೊಟ್ಟು ಕೊಂಡಿದ್ದಾರೆಂಬುದನ್ನು ಗಮನಿಸಬೇಕು.

ಸಂಪ್ರದಾಯವಾದಿಯಾಗಿ, ಗಾಂಧಿವಾದಿಯಾಗಿ ರಾಜಕೀಯವನ್ನು ಪ್ರವೇಶಿಸಿ, ಸುಧಾರಣಾವಾದಿ ಚಳುವಳಿಯ ಮುಂಚೂಣಿಯಲ್ಲೊಬ್ಬರಾಗಿ ಕೇರಳದ ರಾಜಕೀಯದಲ್ಲಿ ಬೇರು ಬಿಡುತ್ತಾ ಬಂದ ಒಟ್ಟು ಬೆಳವಣಿಗೆಯ ಸೂಕ್ಷ್ಮ ಪರಿಚಯವನ್ನು ನಮಗೆ ಮಾಡಿಕೊಡುತ್ತಾರೆ. ಆಯಾ ಕಾಲ ಘಟ್ಟಗಳಲ್ಲಿ ರಾಷ್ಟ್ರೀಯ ಚಳುವಳಿಗಳು (ಖಿಲಾಫತ್, ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ, ಕಾಯಿದೆ ಭಂಗ, ಹರಿಜನೋದ್ಧಾರ, ಕೆ. ಪಿ. ಸಿ. ಸಿ., ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಚಟುವಟಿಕೆ) ಕೇರಳದಲ್ಲಿ, ತಮ್ಮ ಬದುಕಿನಲ್ಲಿ ಉಂಟು ಮಾಡಿದ ಪರಿಣಾಮ, ಅವುಗಳಲ್ಲಿ ತಮ್ಮ ಪಾತ್ರ, ಇಷ್ಟಲ್ಲದೆ, ಕೇರಳಕ್ಕೆ ವಿಶಿಷ್ಟವಾದ ಸುಧಾರಣಾವಾದಿ ಚಳುವಳಿಗಳಲ್ಲಿ (ಯೋಗಕ್ಷೇಮಂ, ಉಣ್ಣಿ ನಂಬೂದಿರಿ ಇತ್ಯಾದಿ), ಸಾಂಸ್ಕೃತಿಕ ಚಳುವಳಿಯಲ್ಲಿ ("ಅಡಿಗೆ ಮನೆಯಿಂದ ರಂಗಸ್ಥಳಕ್ಕೆ" ಮತ್ತು "ಪರದೆ ಮರೆಯ ಮಹಾ ನರಕ" ನಾಟಕಗಳು) ತಮ್ಮ ಪಾತ್ರವನ್ನು ಕುರಿತು, ಹಲವಾರು ಸಂಗಾತಿಗಳು, ನೇತಾರರು ದುಡಿದ, ವಿವರಣೆಗಳು ಸಿಗುತ್ತವೆ.

ಇ. ಎಂ. ಎಸ್. ಅವರ ಅಕ್ಯಾಡಮಿಕ್ ಬದುಕಿನ (ಎಳವೆಯಲ್ಲಿ ವೇದಾಧ್ಯಯನ, ಕಾಲೇಜು–ವಿದ್ಯಾಭ್ಯಾಸ,) ಪತ್ರಿಕೆಗಳಲ್ಲಿ (ಮಾತೃಭೂಮಿ, 'ಪ್ರಭಾತಂ', 'ಉಣ್ಣಿ ನಂಬೂದಿರಿ', 'ಯೋಗಕ್ಷೇಮಂ' ಮುಂತಾದವು) ಕೆಲಸ, ರಾಜಕೀಯ ಭಾಷಣ, ಲೇಖನ, ಪುಸ್ತಕಗಳ ಬರಹ ಇತ್ಯಾದಿ ಹಂತ ಹಂತದ ಬೆಳವಣಿಗೆಯ ಚಿತ್ರಣವೂ 'ನನ್ನ ಬದುಕಿ'ನ ಉದ್ದಕ್ಕೂ ಹೆಣೆದುಕೊಂಡಿದೆ.

ರಾಷ್ಟ್ರದ ಪ್ರಮುಖ ನೇತಾರರಾಗಿ ಬೆಳಗಿದ ಹಲವಾರು ವ್ಯಕ್ತಿಗಳ ಸಾಹಚರ್ಯದಿಂದ ಇ. ಎಂ. ಎಸ್. ಅನುಭವಿಸಿದ ಸ್ವಾರಸ್ಯಕರ ಪ್ರಸಂಗಗಳು, ಹಲವಿವೆ. ಆ ಕಾಲದ ಪ್ರಜಾಪ್ರಭುತ್ವವಾದಿ ಮತ್ತು ಎಡ ಚಳುವಳಿ ರೂಪುಗೊಳ್ಳುವಂತೆ ನಿಷ್ಠೆಯಿಂದ ದುಡಿದ, ನಾಡಿನಲ್ಲಿ ಮತ್ತು ತಮ್ಮ ಮೇಲೆ ಪ್ರಭಾವ ಬೀರಿದ ಹಲವಾರು ವ್ಯಕ್ತಿಗಳ (ಉದಾ : ವಿ. ಡಿ., ಎ. ಕೆ.ಜಿ., ಅಚ್ಯುತನ್, ವಾರಿಯರ್, ಕೇಶವದೇವ, ಶ್ರೀಮತಿ ಮನೇಳಿ, ಶಂಕರ ಕುರಪ್ಪು, ಕೇಳಪ್ಪನ್, ರಹಮಾನ್, ಕೃಷ್ಣಪಿಳ್ಳೆ, ಕೆ. ಸಿ. ಗೋಪಾಲನ್, ಗೋವಿಂದ ಮೆನನ್, ರಾಮನ್, ಭಗತ್‌ಸಿಂಗ್ ಸಹಚರ ಕಿರಣದಾಸ ತಿವಾರಿ, ಜೆ. ಪಿ., ಶ್ರೀ ಆಚಾರ್ಯ ಮುಂತಾದವರು) ಸಹಚರ್ಯದಿಂದ ತಮ್ಮ ಪ್ರಗತಿಯ ಅನುಭವವನ್ನು ಸುಂದರವಾಗಿ ವಿವರಿಸುತ್ತಾರೆ.

ಜೇಲಿನ ಅನುಭವ, ತಾಯಿಯ ಪ್ರೇಮ, ಪಕ್ಷಗಳ ಸಮ್ಮೇಳನಗಳ ವರದಿ, ಬ್ರಾಹ್ಮಣ್ಯಕ್ಕೆ ಸಂಬಂಧಿಸಿದ ಅಂಶಗಳೇ ಮೊದಲಾದ ಘಟನೆಗಳಲ್ಲಿ ಕಾದಂಬರಿಯ ಸ್ಪರ್ಶ ಇದೆ.

ಜೆ. ಪಿ. ಬಗ್ಗೆ ಇ. ಎಂ. ಎಸ್. ಅವರ ಅನುಭವ ವಿಶಿಷ್ಟವಾದುದು. "ಸೋಷಲಿಸಂ ಏತಕ್ಕಾಗಿ" ಗ್ರಂಥದ (ಜೆ. ಪಿ. ಅವರದು– "ರಾಜಕೀಯ ಪ್ರವರ್ತನಗಳಲ್ಲಿ ಮಾರ್ಗದರ್ಶಕವಾಗಿ, ಸಲಹೆ, ಸ್ಫೂರ್ತಿ, ನೀಡುತ್ತಿದ್ದ ಪುಸ್ತಕ ಪುಟ 250) "ಗಾಢವಾದ ವಾಸ್ತವಿಕತೆಗೂ, ಆದಾದ ಒಂದೆರಡು ದಶಕಗಳ ಮೇಲೆ ತಾತ್ವಿಕವಾಗಿ ಪರಿವರ್ತನೆ ಹೊಂದಿದ ಜಯಪ್ರಕಾಶರ ಸರ್ವೋದಯ ದೃಷ್ಟಿಕೋನಕ್ಕೂ ನಡುವೆ ಎಂತಹ ಅಜಗಜಾಂತರ ವ್ಯತ್ಯಾಸ!" [ಪುಟ 250 ಪುಟ 256]

"ಆಗ ಜೇಲಿನಲ್ಲಿದ್ದ ಪ್ರಮುಖ ಮುಂದಾಳುಗಳಲ್ಲೊಬ್ಬರು ಡಾ|| ಪಟ್ಟಾಭಿ ಸೀತಾರಾಮಯ್ಯನವರು. ಗಾಂಧೀ ತತ್ವಗಳನ್ನು ಕುರಿತು ಅಧಿಕೃತ ವ್ಯಾಖ್ಯಾನಕಾರನೆಂದು ಹೆಸರುವಾಸಿಯಾಗಿದ್ದವರು, ಆತ ಹಾಗಿರುವಾಗ ಜೈಲುಜೀವನ ನಡೆಸುವ ವೇಳೆ ಅಂಥ ತತ್ವಗಳನ್ನು 'ಚಾಚು' ತಪ್ಪದೆ ಆಚರಣೆ ತರುವ ಜವಾಬುದಾರಿ ಆತನದಾಗಿರಬೇಕಲ್ಲವೆ ? ಆದರೆ ಜೇಲಿನ ನಿಯಮಗಳೆನ್ನೆಲ್ಲ ಅಲ್ಲಗೆಳೆದು ತಮ್ಮ ಇನ್‌ಷ್ಯೂರೆನ್ಸ್ ಕಂಪನಿಯ ವ್ಯವಹಾರಗಳನ್ನೆಲ್ಲ ಜೈಲಿನಲ್ಲಿ ಕೂತು ಮಾಡುತ್ತಿದ್ದರು" (ಪುಟ 198) ಕಾಂಗ್ರೆಸ್ಸಿನ ಭ್ರಷ್ಟತೆಯನ್ನು ಇಂಥ ಹಲವಾರು ಅನುಭವಗಳಿಂದ ಸ್ಪಷ್ಟಗೊಳಿಸುತ್ತಾರೆ ಇ. ಎಂ. ಎಸ್.

ಹೆಚ್ಚಿನ ಆತ್ಮಕಥನಗಳು, 'ಅಹಂ' ಭಾವದಿಂದ, ಅತಿ ರಂಜಕತೆ, ಅಹಂಮತೆ, ಭ್ರಮೆ, ಮುಂತಾದ ಅಸಹಜ, ಅತಿರೇಕಗಳಿಂದ ಬಾಧಿತವಾಗುವುದೇ ಹೆಚ್ಚು. ಯಾವ ಭ್ರಮೆ ಅನವಶ್ಯಕ ಹೆಮ್ಮೆ, ಅತಿರೇಕ ಆಕಾಂಕ್ಷೆಗಳಿಲ್ಲದೆ ತೂಕಬದ್ಧವಾಗಿ ಮೂಡಿಬಂದ ಈ ಆತ್ಮಕಥೆ, ಈ ರೀತಿಯ ಬರವಣಿಗೆಗೆ ಉತ್ಕೃಷ್ಟವಾದ ಮಾದರಿಯಾಗಿ ನಿಲ್ಲಬಲ್ಲದು. (ಇದರ ಮುಂದಿನ ಭಾಗವನ್ನು ಓದುಗರು ವಿಶೇಷ ಕುತೂಹಲದಿಂದ ನಿರೀಕ್ಷಿಸುತ್ತಾರಷ್ಟೆ!) ಈ ಗ್ರಂಥ ಚರಿತ್ರೆಯ ಮಹತ್ವಪೂರ್ಣ 'ನಿರ್ಮಾಣ' ವಾಗಿದೆ.

ಇದೀಗ ನೆರೂದನ, 'Memoirs' ನೆನಪಾಗುತ್ತಿರುವುದು ಅಸಹಜವಲ್ಲವೆಂದು ತಿಳಿಯುತ್ತಿದ್ದೇನೆ.........

[ಕಾಂ| ಇ. ಎಂ. ಎಸ್. ಅವರು ಸಿ.ಪಿ. ಐ. (ಎಂ.) ಸೆಕ್ರೆಟರಿಯಾಗಿ ಇತ್ತೀಚೆಗೆ ಈ ಆತ್ಮಕಥೆಯನ್ನು ಬರೆದುದಲ್ಲ. ಆವಾಗಲೇ ಅಂದರೆ 1937ರ ಸುಮಾರಿಗೆ ಮಲೆಯಾಳಂನ ಪ್ರಭಾತಂ ಪತ್ರಿಕೆಯಲ್ಲಿ ಇದು ಲೇಖನಮಾಲಿಕೆಯ ರೂಪದಲ್ಲಿ ಪ್ರಕಟಗೊಂಡದ್ದಾಗಿದೆ. ಅವರ ಜೀವನದ ಪೂರ್ವಾರ್ಧ ಭಾಗ ಅಂದರೆ 1920 ರಿಂದ 1937ರ ವರೆಗಿನ ಜೀವನದ ಅನುಭವಗಳ ಚಿತ್ರಣವಾಗಿದೆ. ಅವರ ಇಡೀ ಜೀವನದ ಚಿತ್ರಣದಲ್ಲಿ ಎದ್ದು ನಿಲ್ಲುವ ಮುಖ್ಯ ವಿಷಯ : ಅವರು ನಂಬೂದರಿ ಬ್ರಾಹ್ಮಣ ಸಂಪ್ರದಾಯ ಸಮಾಜದ ಕಂದಾಚಾರ, ಮೂಢನಂಬಿಕೆ, ಅನಿಷ್ಟ ಕ್ರೂರ ಪದ್ಧತಿಗಳ ವಿರುದ್ಧ ಬಾಲ್ಯದಿಂದಲೂ ಸಿಡಿದೆದ್ದು, ಮೊದಲು ಸಮಾಜ ಸುಧಾರಕನಾಗಿ ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸಿದ್ದು, ನಂತರ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಅಗ್ರಗಣ್ಯ ನೇತಾರರಲ್ಲೊಬ್ಬರಾಗಿ ಪರಿವರ್ತನೆಗೊಂಡುದುದು, ಇನ್ನೂ ಮುಂದೆ ಬಂದು ಈಗ ಕ್ರಾಂತಿಕಾರಿ-ಹೋರಾಟದ ಮುಖ್ಯ ನಾಯಕರಾಗಿರುವುದು. ಅವರ ಜೀವನದುದ್ದಕ್ಕೂ ಹೋರಾಟ, ಪರಿಶ್ರಮ, ಪರಿವರ್ತನೆ ಒಂದು ಅವ್ಯಾಹತ ಕೊಂಡಿ ಹೊಂದಿರುವ ಮತ್ತು ಬದಲಾವಣೆಗಳನ್ನು ಮೈಗೂಡಿಸಿಕೊಂಡಿರುವದನ್ನು ನಾವು ಗುರುತಿಸಬಹುದಾಗಿದೆ.

ಈ ಆತ್ಮಕಥೆಯಲ್ಲಿ ಬರುವ ಸಂಬಂಧಿಸಿದ ವಿಚಾರಗಳಿಗೆ, ಕೇರಳ ಸಂಪ್ರದಾಯ ಸಮಾಜದ ಬಗ್ಗೆ ಕಾಂ| ಇ. ಎಂ. ಎಸ್. ಅವರು ಸತತವಾಗಿ ತಮ್ಮ ವಿಶ್ಲೇಷಣೆಯನ್ನು ಮುಂದುವರಿಸಿಕೊಂಡು ಬಂದಿರುತ್ತಾರೆ. 1967 ರಲ್ಲಿ 'ಕೇರಳ ನಿನ್ನೆ-ಇಂದು-ನಾಳೆ' ಎನ್ನುವ ಗ್ರಂಥ ಇಂಥಹದೇ ವಿಚಾರಗಳ, ಅವರ ಪೂರ್ವಾರ್ಧ ಜೀವನದ ಆತ್ಮಕಥೆಯಲ್ಲಿ ಬರುವ ವಿಷಯಗಳ ಬಗೆಗಿನ ಅತ್ಯಂತ ಇತ್ತೀಚಿಗಿನ ವಿಶ್ಲೇಷಣೆ ಮಾಡಿದ ಕೃತಿಯಾಗಿದೆ.—ಸಂಪಾದಕ.]

ಒಕ್ಕಲಿನ ಭೂಮಿ ಬಲತ್ಕಾರದಿಂದ ಸ್ವಾಧೀನಕ್ಕೆ ಪೋಲೀಸರಿಂದ ಲಾಠೀ ಚಾರ್ಜು

ಮಂಗಳೂರಿನ ಉಳ್ಳಾಲ, ಮಾರ್ಗತಲೆಯಲ್ಲಿ ಆಲಿಯಬ್ಬಾಜಿ ಎಂಬುವರಿಗೆ, ಭೂನ್ಯಾಯ ಮಂಡಳಿಯು ಅವರ ಒಕ್ಕಲು ಹೆನ್ರಿ ಡಿಸೋಜ ಎಂಬುವರ ಸ್ವಾಧೀನವಿರುವ ಸ್ಥಳವನ್ನು ಕೊಟ್ಟಿರುವುದು. 8-3-82 ರಂದು ಉಳ್ಳಾಲ ಪೋಲೀಸು ಪಡೆಯೊಂದಿಗೆ ಭೂಮಾಲೀಕರು ಆಗಮಿಸಿ ಭೂಸ್ವಾಧೀನಕ್ಕೆ ಪ್ರಯತ್ನಿಸಿದರು. ಒಕ್ಕಲು ತನ್ನ ಕುಟುಂಬ ಸಮೇತ ಸ್ವಾಧೀನತೆಯನ್ನು ಪ್ರತಿಭಟಿಸಿದರು. ಬಳಿಕ ಉಳ್ಳಾಲ್ ಸಬ್–ಇನ್ಸ್‌ಪೆಕ್ಟರ್ ಅವರು ಮಂಗಳೂರಿನಿಂದ ರಿಜರ್ವ್ ಪೋಲೀಸ್ ಪಡೆಯನ್ನು ತರಿಸಿದರು. ರಿಜರ್ವ್ ಪಡೆ ಒಕ್ಕಲಿನ ಮನೆಯ ಹೆಂಗಸು ಮಕ್ಕಳಾದಿಯಾಗಿ ಎಲ್ಲರನ್ನೂ ಕ್ರೂರವಾಗಿ ಥಳಿಸಿದ್ದಾರೆ. ಇದೂ ಸಾಲದೆಂಬಂತೆ ಅವರುಗಳನ್ನು ಸ್ಟೇಷನ್ನಿಗೆ ಕರೆದೊಯ್ದು, ಅಲ್ಲಿಯೂ ಥಳಿಸಿದ್ದಾರೆ.

ಕೋಟೆಕಾರು ರೈತ ಸಂಘದ ಅಧ್ಯಕ್ಷರು ಈ ಸುದ್ದಿ ಕೇಳಿದೊಡನೆ ಸ್ಟೇಷನ್ನಿಗೆ ಹೋಗಿ ಬಂಧಿಸಿದವರನ್ನು ಬಿಡುಗಡೆ ಮಾಡಬೇಕೆಂದು ಸಬ್-ಇನ್ಸ್‌ಪೆಕ್ಟರನ್ನು ವಿನಂತಿಸಿಕೊಂಡರು. ಕೊನೆಯಲ್ಲಿ ಬಂಧಿತರನ್ನು ಕೋರ್ಟಿಗೆ ಹಾಜರುಪಡಿಸಿದಾಗ ಜಾಮೀನಿನ ಮೂಲಕ ಬಿಡುಗಡೆ ಮಾಡಿಸಲಾಯಿತು.

ಖಂಡನಾ ಸಭೆ

ಈ ಬಂಧನ, ಲಾಠೀ ಚಾರ್ಜನ್ನು ಖಂಡಿಸಿ 10-3-82 ರಂದು ಮಾರ್ಗತಲೆಯಲ್ಲಿ ಕೋಟೆಕಾರ್ ಸರ್ಕಲ್ ರೈತ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆ ನಡೆಯಿತು.

ಸಭೆಯ ಆರಂಭದಲ್ಲಿ ರೈತ–ಕಾರ್ಮಿಕರ ಬೃಹತ್ ಮೆರವಣಿಗೆಯು ನಡೆಯಿತು.

ನಂತರ ಉಳ್ಳಾಲ್ ಪಂಚಾಯತ್ ಸದಸ್ಯ ಶ್ರೀ ಗಂಗಾಧರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ| ಜೆ. ಕೃಷ್ಣಪ್ಪ, ಯು. ಪಿ. ಡಿಸೋಜ, ಯು. ಬಿ. ಲೋಕಯ್ಯ, ಕೆ. ರಾಂ ನಾಯಕ್ ಮೊದಲಾದವರು ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿ ಭಾಷಣವಿತ್ತರು. ಭೂನ್ಯಾಯ ಮಂಡಳಿಗಳ ಅಕ್ರಮ ತೀರ್ಪಿನನ್ವಯ ಒಂದಿಂಚೂ ಸ್ಥಳ ಬಿಟ್ಟುಕೊಡಕೂಡದೆಂಬ ಅಭಿಪ್ರಾಯ ಪಡಲಾಯಿತು.

ಆರಂಭದಲ್ಲಿ ಸರ್ಕಲ್ ರೈತ ಸಂಘದ ಕಾರ್ಯದರ್ಶಿ ಕಾಂ| ರಾಮಚಂದ್ರ ಉಚ್ಚಿಲ್ ಸಭಿಕರನ್ನು ಸ್ವಾಗತಿಸಿದರು.

ಸಿಂಧನೂರು

ದ. ಸಂ. ಸ.ನೇತೃತ್ವದಲ್ಲಿ ಮೆರವಣಿಗೆ

ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ 6-3-82 ರಂದು ವಾಸಕ್ಕೆ ಸ್ಥಳ ಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿಯ ಆಶ್ರಯದಲ್ಲಿ ಮೆರವಣಿಗೆ ಹೊರಡಿಸಲಾಗಿತ್ತು.

ಜಾಗ ಕೊಡಿಸುತ್ತೇವೆಂದು ಹೇಳಿ ಓಟು ಗಿಟ್ಟಿಸಿದ ಆಳುವ ಪಕ್ಷದವರು ಇದುವರೆಗೂ ಆ ಕಡೆ ತಲೆ ಹಾಕದ ಕಾರಣ, ವಸತಿಹೀನರು ದ. ಸಂ. ಸ. ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ.

6-3-82 ರಂದು ನಡೆದ ಮೆರವಣಿಗೆಯಲ್ಲಿ ಮಹಿಳೆಯರೂ ಸೇರಿದಂತೆ 200 ಜನರು ಭಾಗವಹಿಸಿದ್ದರು.

ಆರಂಭದಲ್ಲಿ ಮೂರು ತಂಡಗಳು ಅನುಕ್ರಮವಾಗಿ ಪಿ. ಡಬ್ಲ್ಯು. ಡಿ. ಕ್ಯಾಂಪ್, ಸುಕಾಲ್‌ಪೇಟೆ, ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ತಹಸೀಲ್ ಕಚೇರಿಯಲ್ಲಿ ಸಮಾವೇಶಗೊಂಡವು. ಅಲ್ಲಿಂದ ನಗರದ ಮುಖ್ಯ ರಸ್ತೆಗಳ ಮೂಲಕ ಪುರಸಭೆಯನ್ನು ತಲುಪಿತು.

ಶಾಸಕ ಶ್ರೀ ಆರ್. ನಾರಾಯಣಪ್ಪ, ತಹಸೀಲ್ದಾರ್ ಮತ್ತು ಪುರಸಭೆ ಮುಖ್ಯಾಧಿಕಾರಿಗಳೊಡನೆ ದ. ಸಂ. ಸ. ಪ್ರತಿನಿಧಿಗಳು ದೀರ್ಘವಾಗಿ ಚರ್ಚಿಸಿದ ಮೇಲೆ 30 ದಿನಗಳೊಳಗೆ ಜಾಗ ನೀಡುವುದಾಗಿ ತಹಸೀಲ್ದಾರರು ವಾಗ್ದಾನ ಮಾಡಿದ್ದಾರೆ.

ಸಾಲ ವಸೂಲಿಯ

ಬಲಾತ್ಕಾರದ ಕ್ರಮಕ್ಕೆ ಪ್ರತಿಭಟನೆ

1974ರಲ್ಲಿ ದ. ಕ. ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ನೆರೆಯ ದುರಂತದಿಂದ ಸಾವಿರಾರು ಕುಟುಂಬಗಳ ಸರ್ವಸೊತ್ತುಗಳು ನಾಶವಾಗಿ, ಮನೆ-ಮಠಗಳನ್ನು ಕಳೆದುಕೊಂಡಿದ್ದವು.

ಸರ್ಕಾರ ಮನೆ ಕಟ್ಟಲು ಸಹಾಯ ಸಾಲವಾಗಿ ರೂ. 2400 ನೀಡಿತ್ತು. ಇದೀಗ ಇನ್ನೂ ಚೇತರಿಸದ ಬಡ ನೆರೆ ಸಂತ್ರಸ್ಥರ ಸಾಲ ವಸೂಲಿಯ ತರಾತುರಿಯಲ್ಲಿ ಅಧಿಕಾರಿಗಳು ಮನೆ ಮನೆಗೆ ನುಗ್ಗಿ ಹೆದರಿಸಿ, ಬೆದರಿಸಿ ಕೈಗೆ ಸಿಕ್ಕಿದ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯು ಈ ಬಲಾತ್ಕಾರದ ಕ್ರಮವನ್ನು ಕೈಬಿಡಬೇಕೆಂದು ಒತ್ತಾಯಿಸಿದೆ. ಮುಖ್ಯ ಮಂತ್ರಿಯವರಿಗೆ ತಂತೀ ಮೂಲಕ ವಿಷಯ ತಿಳಿಸಲಾಗಿದೆ. ಬಲಾತ್ಕಾರದ ಸಾಲ ವಸೂಲಿ ಕ್ರಮ ಕೈಬಿಡದಿದ್ದರೆ ಹೋರಾಟ ನಡೆಸಬೇಕಾದೀತೆಂದು ಕಾಂ| ಬಿ. ವಾಸುಗಟ್ಟೆ ಎಚ್ಚರಿಸಿದ್ದಾರೆ.

ಎ. ಕೆ. ಜಿ. ದಿನಾಚರಣೆಯಂದು

ಅರ್ಥಪೂರ್ಣ ವಿಚಾರ ಸಂಕಿರಣ

ಮಾರ್ಚಿ 22 ರಂದು ಕಾಂ| ಎ. ಕೆ. ಗೋಪಾಲನ್‌ರ 5ನೇ ವರ್ಧಂತಿಯುಂದು, ಬೆಂಗಳೂರಿನ ಎ. ಕೆ. ಜಿ. ದಿನಾಚರಣೆ ಸಮಿತಿಯ ಆಶ್ರಯದಲ್ಲಿ 'ವಿಜ್ಞಾನ ಮತ್ತು ಸಾಮ್ರಾಜ್ಯವಾದ' ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಎ. ಕೆ. ಜಿ. ಆತ್ಮಚರಿತ್ರೆ (ನನ್ನ ಜೀವನದ ಕಥೆ)ಯ ಕನ್ನಡ ಅನುವಾದವನ್ನೂ ಅದೇ ದಿನ ಬಿಡುಗಡೆ ಮಾಡಲಾಯಿತು.

ವಿಚಾರ ಸಂಕಿರಣದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್‌ನ ಡಾ|| ಎಸ್. ಚಟರ್ಜಿ ಮತ್ತು ಪ್ರೊ|| ಕೆ.ವಿ. ವಾಸು, ಪ್ರಸಿದ್ಧ ಅರ್ಥಶಾಸ್ತ್ರಜ್ಞ ಡಾ|| ವೆಂಕಟೇಶ ಆತ್ರೇಯ, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್‌ನ ಡಾ|| ಪರಮೇಶ್ವರನ್ ಹಾಗೂ ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟರಿಯೆಟ್ ಸದಸ್ಯ ಕಾಂ| ವಿ. ಜೆ. ಕೆ. ನಾಯರ್ ಇವರುಗಳು ಭಾಗವಹಿಸಿದ್ದರು.

ಡಾ|| ಚಟರ್ಜಿ ಎ. ಕೆ. ಜಿ. ಸಮಿತಿಯ ಪರವಾಗಿ ಮಂಡಿಸಿದ ಪ್ರಬಂಧದಲ್ಲಿ, "20ನೇ ಶತಮಾನ ಅದ್ಭುತ ವೈಜ್ಞಾನಿಕ, ತಾಂತ್ರಿಕ ಪ್ರಗತಿಗಳನ್ನು ಕಂಡಿರುವ ಕಾಲ. ಆದರೂ ಜನಸಮುದಾಯ ಬಡತನ, ಹಸಿವುಗಳಲ್ಲೇ ನರಳುತ್ತಿರುವುದಕ್ಕೆ ಕಾರಣವೇನೆಂದರೆ ವಿಜ್ಞಾನವನ್ನು ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಉಪಯೋಗಿಸುವ ಬದಲಾಗಿ ಭಯಂಕರ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಸಾಮ್ರಾಜ್ಯವಾದಿಗಳು ಉಪಯೋಗಿಸುತ್ತಿರುವುದೇ ಕಾರಣವೆಂದರು. ಸಾಮ್ರಾಜ್ಯವಾದದ ಹಸ್ತಕ್ಷೇಪದಿಂದ, ಬಹುರಾಷ್ಟ್ರೀಯ ಸಂಸ್ಥೆಗಳ ಲಾಭಕೋರತನದಿಂದ ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನ ನೀತಿ ವಿರೂಪಗೊಳ್ಳುತ್ತಿದ್ದು, ಇದರ ವಿರುದ್ಧ ಪ್ರತಿಭಟಿಸಬೇಕಾಗಿದೆ. ವಿಜ್ಞಾನಿಗಳು ಸಾಮಾಜಿಕ ಪ್ರಜ್ಞೆಯ ಅಭಾವದಿಂದ ಪ್ರತ್ಯಕ್ಷ, ಅಪ್ರತ್ಯಕ್ಷವಾಗಿ ಸಾಮ್ರಾಜ್ಯವಾದದೊಂದಿಗೆ ಸಹಕರಿಸುತ್ತಿರುವುದಕ್ಕೆ ವಿಷಾದಿಸಿದ ಡಾ|| ಚಟರ್ಜಿ, ವಿಜ್ಞಾನದ ದುರುಪಯೋಗದ ವಿರುದ್ಧ ಎಲ್ಲಾ ಜನವಿಭಾಗಗಳು ಒಂದಾಗಿ (ವಿಜ್ಞಾನಿಗಳು ಸೇರಿದಂತೆ) ಹೋರಾಡಬೇಕು ಎಂದು ಕರೆಯಿತ್ತರು.

ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ವೆಚ್ಚಗಳನ್ನು ವಿಶ್ಲೇಷಿಸಿದ ಪ್ರೊ|| ಕೆ.ವಿ. ವಾಸು ಅವರು ಇದು ಹೆಚ್ಚಿದಂತೆ ವಿದೇಶಿ ಹೊಂದಾಣಿಕೆ (collabrations) ಗಳೂ, ತಂತ್ರಜ್ಞಾನದ ಪೂರ್ಣ ಆಮದು ಸಹ ಹೆಚ್ಚಿನ ದರದಲ್ಲಿ ಏರಿದೆ. ಭಾರತದಲ್ಲಿ ಸರಿಯಾದ ವಿಜ್ಞಾನ ಮತ್ತು ತಾಂತ್ರಿಕತೆಯ ನೀತಿಯ ಅಭಾವವಿದೆ. ಸಾಮ್ರಾಜ್ಯಶಾಹಿ / ಬಂಡವಾಳಶಾಹಿಗಳ ಲಾಭಕೋರತನ ಒಂದೇ ಈ ನೀತಿಯ ಆಧಾರ ಎಂದರು. ಬಂಡವಾಳಶಾಹಿ ಪದ್ಧತಿಯುಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವೂ ಒಂದು ಸರಕು ಆಗಿರುವುದರಿಂದ ವಿಜ್ಞಾನಿಗಳೂ ತಮ್ಮ ಜಾಣ್ಮೆ, ಜ್ಞಾನವನ್ನು ಮಾರಿಕೊಳ್ಳುವ ಕೂಲಿಕಾರರಂತೆ ಆಗಿದ್ದಾರೆ ಎಂದ ಪ್ರೊ|| ವಾಸು, ಇದು ಬದಲಾಗಿ ವಿಜ್ಞಾನಿಗಳು ವಿಜ್ಞಾನದ ದುರುಪಯೋಗದ ವಿರುದ್ಧ, ಜನಪರ ವಿಜ್ಞಾನಕ್ಕಾಗಿ ಹೋರಾಡಬೇಕೆಂದರು.

ಡಾ|| ವೆಂಕಟೇಶ್ ಆತ್ರೇಯ ಅವರು ಸಮಾಜ ವಿಜ್ಞಾನಗಳಲ್ಲಿ ಸಾಮ್ರಾಜ್ಯಶಾಹಿಯ ಸೂಕ್ಷ್ಮ ಪ್ರಭಾವಗಳ ಬಗ್ಗೆ ಮಾತನಾಡಿದರು. ಸಮಾಜ ವಿಜ್ಞಾನಗಳ ಅಧ್ಯಯನದಲ್ಲಿ ಒಂದು ಸಿದ್ಧಾಂತ (ಪ್ರತ್ಯಕ್ಷ ಅಥವಾ ಪರೋಕ್ಷ) ಅನಿವಾರ್ಯವಾಗಿದ್ದು ಇಂದಿನ ಭಾರತದಲ್ಲಿ ವಿಶ್ವವಿದ್ಯಾನಿಲಯಗಳ ಪಠ್ಯಕ್ರಮದಲ್ಲಿ, ಸಂಶೋಧನಾ ರಂಗಗಳಲ್ಲಿ ಸಾಮ್ರಾಜ್ಯಶಾಹಿ ತನ್ನ ಸಿದ್ಧಾಂತವನ್ನು ಬಹಳ ಸೂಕ್ಷ್ಮ ರೀತಿಯಲ್ಲಿ ಪ್ರಚಾರ ಮಾಡುತ್ತಿದೆ. ಮೂರನೇ ಜಗತ್ತಿನ ದೇಶಗಳ ಬೆಳವಣಿಗೆಯ ಅಭಾವಕ್ಕೆ (ಭಾರತವೂ ಸೇರಿದಂತೆ) ಜನರ ಅಜ್ಞಾನ, ಜನಸಂಖ್ಯಾಬಾಹುಳ್ಯ, ಹಳೆದೃಷ್ಟಿಕೋನದ ಕಾರಣ ಕೊಡುವ ಸಾಮ್ರಾಜ್ಯಶಾಹಿ, ನವವಸಾಹತುಶಾಹಿಯ ಪ್ರಭಾವವನ್ನು ಅಲ್ಲಗಳೆಯುವುದು, ಮರೆಮಾಚುವುದು ಇವೆಲ್ಲ ಇದಕ್ಕೆ ಉದಾಹರಣೆ. ಈ ಸಾಮ್ರಾಜ್ಯಶಾಹಿ ಸಿದ್ಧಾಂತವನ್ನು ಪ್ರಚಾರ ಮಾಡಲು ಪಠ್ಯಪುಸ್ತಕ ವಿನಿಮಯ ಕಾರ್ಯಕ್ರಮಗಳು, ಸಂಶೋಧನಾ ಕಾರ್ಯಕ್ರಮಗಳಿಗೆ ಸಹಾಯ, ಪ್ರತಿಭಾವಂತ ವ್ಯಕ್ತಿಗಳಿಗೆ ಸ್ಕಾಲರ್‌ಶಿಪ್, ಪುಸ್ತಕ ಪ್ರಕಾಶನ ಉದ್ಯಮದ ಮೇಲೆ ಹತೋಟಿ ಇತ್ಯಾದಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸಮಾಜ ವಿಜ್ಞಾನಗಳಲ್ಲಿ ಸಾಮ್ರಾಜ್ಯಶಾಹಿ ಸಿದ್ಧಾಂತದ ವಿರುದ್ಧ ಹೋರಾಡುವುದು ಅತ್ಯಗತ್ಯ ಎಂದರು.

ಅನಂತರ ಮಾತನಾಡಿದ ಕಾಂ| ವಿ. ಜೆ. ಕೆ. ನಾಯರ್, ಎ. ಕೆ. ಜಿ. ಯವರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಘಟ್ಟಗಳನ್ನು ಗುರುತಿಸಿದರು. ಮಾನವ ಸಮಾಜದಲ್ಲಿ ವಸಾಹತುಶಾಹಿ, ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಚಾರಿತ್ರಿಕ ಘಟ್ಟಗಳನ್ನು ವಿವರವಾಗಿ ವಿಶ್ಲೇಷಿಸಿ, ಇವುಗಳಿಗೂ ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆಗೂ ಇರುವ ಸಂಬಂಧಗಳ ಪರಿಚಯ ಮಾಡಿಕೊಟ್ಟರು. ಪೂರ್ವದ ದೇಶಗಳ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಗೆ ತಡೆಬಿದ್ದು ತನ್ನದೇ ವಿಜ್ಞಾನ, ತಂತ್ರಜ್ಞಾನ ಬೆಳೆಸಿ ಪ್ರಬಲವಾದ ವಸಾಹತುಶಾಹಿ, ಸಾಮ್ರಾಜ್ಯಶಾಹಿಗೆ ಎಡೆಕೊಟ್ಟ ಮೇಲೆ ಅದು ಈಗ ತನಗೆ ಪೂರಕವಲ್ಲದ ಬೆಳವಣಿಗೆ (ಈ ರಂಗಗಳಲ್ಲಿ) ಗಳನ್ನು ತಡೆಯುತ್ತಿದ್ದು, ತನ್ನ ಹಳಸಲು ತಂತ್ರಜ್ಞಾನವನ್ನು ಮೂರನೇ ಜಗತ್ತಿನ ದೇಶಗಳ ಮೇಲೆ ಹೇರುತ್ತಿದೆ. ಈ ಪ್ರದೇಶಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ, ಉಪಯೋಗಕ್ಕೆ ಅಡ್ಡಿ ಒಡ್ಡುತ್ತಿದೆ. ವಿಜ್ಞಾನಕ್ಕೆ ಸಾರ್ವತ್ರಿಕ ಮತ್ತು ವಿಶಿಷ್ಟ ರಾಷ್ಟ್ರೀಯ ರೂಪ ಎರಡೂ ಇದ್ದು, ಸಾಮ್ರಾಜ್ಯಶಾಹಿ ವಿರುದ್ಧ ಎರಡನೇಯ ರೀತಿಯ ವಿಜ್ಞಾನವನ್ನು ಬೆಳೆಸಬೇಕು. ಇದಕ್ಕಾಗಿ ಜನಪರ ವಿಜ್ಞಾನ ಚಳುವಳಿಯೊಂದೇ ದಾರಿ ಎಂದರು.

ಕೊನೆಯದಾಗಿ ಮಾತನಾಡಿದ ಡಾ|| ಪರಮೇಶ್ವರನ್ ಅವರು ಇಂದಿನ ಪರಿಸ್ಥಿತಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ, ರಾಷ್ಟ್ರೀಯವೂ ಆಗಿಲ್ಲ, ಅಂತರಾಷ್ಟ್ರೀಯವೂ ಆಗಿಲ್ಲ. ಕೆಲವು ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳ ಆಗಿವೆ. ಸಾಮ್ರಾಜ್ಯಶಾಹಿ 'ವಿಜ್ಞಾನ'ದಲ್ಲಿ ಆಂತರಿಕ ವೈರುಧ್ಯಗಳು ತಲೆದೋರಲಾರಂಭಿಸಿವೆ. ತಮ್ಮ ಲಾಭ, ಹಿತಾಸಕ್ತಿ ಕಾಪಾಡಿಕೊಳ್ಳಲು ಹೊಸ ತಂತ್ರಜ್ಞಾನವನ್ನು ದಮನ ಮಾಡಿದ್ದು (ಎ. ಟಿ. ಟಿ. ಕಂಪನಿ ಎಫ್. ಎಂ. ನ ಆವಿಷ್ಕಾರವನ್ನು ದಮನಿಸಿದ್ದು) ಇದಕ್ಕೆ ಒಳ್ಳೇ ಉದಾಹರಣೆ. ಮೂಲಭೂತ ವಿಜ್ಞಾನಗಳು ಮುಂದುವರಿದಂತೆ ಇದರ ಸಂಶೋಧನೆಗಳಿಗೂ ಸಾಮ್ರಾಜ್ಯಶಾಹಿ ಸಿದ್ಧಾಂತಕ್ಕೂ ವೈರುಧ್ಯ ಕಂಡುಬರುತ್ತಿದ್ದು, ಸಾಮ್ರಾಜ್ಯಶಾಹಿ ದೇಶಗಳಲ್ಲಿ ಅವೈಜ್ಞಾನಿಕ ವಿಜ್ಞಾನ ಬೆಳೆಯುತ್ತಿದೆ ಎಂದರು. ಗತಿತಾರ್ಕಿಕ ಭೌತಿಕವಾದದ ಸಿದ್ಧಾಂತವೊಂದೇ ವೈಜ್ಞಾನಿಕ ಸಿದ್ಧಾಂತವಾಗಿದ್ದು ಇದರ ಸಹಾಯದಿಂದ ಮಾತ್ರವೇ ಸಾಮ್ರಾಜ್ಯಶಾಹಿ ಮತ್ತು ಅದರ 'ಅವೈಜ್ಞಾನಿಕ ವಿಜ್ಞಾನ' ವನ್ನಾಗಲೀ, ಅದರ ತಂತ್ರಜ್ಞಾನವನ್ನಾಗಲಿ (ವಿಯೆಟ್ನಾಂ ಮಾಡಿದಂತೆ) ವಿರೋಧಿಸಿ ಸೋಲಿಸಲು ಸಾಧ್ಯ ಎಂದರು.

ವಿಚಾರಸಂಕಿರಣದ ಆರಂಭದ ಮೊದಲು ಎ. ಕೆ. ಜಿ. ದಿನಾಚರಣೆ ಸಮಿತಿಯ ಚೇರ್‌ಮನ್ ಡಾ|| ಪ್ರಕಾಶ್ ಸಿ. ರಾವ್ ಅವರು ಅತಿಥಿಗಳನ್ನು ಸಭಿಕರಿಗೆ ಪರಿಚಯಿಸಿಕೊಟ್ಟರು.

—

ನೀವು ನಮ್ಮ ಕೈಗಳಾಗಿರಿ !

ಸಂಪೂರ್ಣ ರಶಿಯಾ ಓದಲು ಕಲಿಯತೊಡಗಿತ್ತು. ಹಾಗೂ ರಾಜ್ಯಶಾಸ್ತ್ರ ಅರ್ಥಶಾಸ್ತ್ರ, ಇತಿಹಾಸ ಇವುಗಳ ಅಭ್ಯಾಸ ನಡೆಸಿತ್ತು–ಕಾರಣವೇನೆಂದರೆ ಜನರಲ್ಲಿ ಜ್ಞಾನ ಪ್ರಾಪ್ತಿಯ ಇಚ್ಛೆ ಚಿಗುರಿತ್ತು...... ಪ್ರತಿಯೊಂದು ನಗರದಲ್ಲಿ, ಬಹುಸಂಖ್ಯ ಶಹರುಗಳಲ್ಲಿ ಹಾಗೂ ಗಡಿಭಾಗದಲ್ಲಿ ಪ್ರತಿಯೊಂದು ರಾಜಕೀಯ ಗುಂಪಿನ ತನ್ನದೇ ಆದ ವರ್ತಮಾನ ಪತ್ರವಿರುತ್ತಿತ್ತು. ಕೆಲವೆಡೆಯಂತೂ ಅನೇಕ ವರ್ತಮಾನ ಪತ್ರಿಕೆಗಳಿದ್ದವು. ಸಾವಿರಾರು ಸಂಘಟನೆಗಳು ಲಕ್ಷಾವಧಿ ಪತ್ರಿಕೆಗಳನ್ನು ಹಂಚುತ್ತಿದ್ದವು, ಹಾಗೂ ಸೈನ್ಯದಲ್ಲಿ, ಹಳ್ಳಿಗಳಲ್ಲಿ, ಕಾರ್ಖಾನೆಗಳಲ್ಲಿ ಹಾಗೂ ರಸ್ತೆ ಬೀದಿಗಳಲ್ಲಿ ಅವುಗಳ ಸುರಿಮಳೆ ಸಾಗಿತ್ತು. ದೀರ್ಘಕಾಲದವರೆಗೆ ತಡೆಹಿಡಿಯಲ್ಪಟ್ಟಿದ್ದ ಜ್ಞಾನಪ್ರಾಪ್ತಿಯ ಹಸಿವು ಕ್ರಾಂತಿಯೊಂದಿಗೇನೇ ದಶದಿಕ್ಕುಗಳಿಗೂ ಹಬ್ಬಿತು ಹಾಗೂ ವಿರಾಟ ರೂಪ ತಾಳಿತು. ಒಂದೇ ಒಂದು ಸ್ಮೋಲ್ನಿ ಸಂಸ್ಥೆಯಿಂದ ಮೊದಲಿನ ಆರು ತಿಂಗಳುಗಳಲ್ಲಿ ಪ್ರತಿ ದಿವಸ ಟನ್ನುಗಟ್ಟಲೆ ಸಾಹಿತ್ಯವು ಗಾಡಿ, ರೈಲುಗಾಡಿ ತುಂಬಿ ದೇಶದ ಮೂಲೆಮೂಲೆಗೂ ಸಾಗಿಸಲ್ಪಡುತ್ತಿತ್ತು. ತೃಷಾರ್ತ ಮರುಭೂಮಿಯು ಯಾವರೀತಿ ನೀರನ್ನಿಂಗಿಸಿಕೊಳ್ಳುತ್ತದೆಯೋ ಅದೇ ರೀತಿಯಲ್ಲಿ ರಶಿಯನ್ ಜನತೆಯು ಸಾಹಿತ್ಯಪ್ರಾಶನ ನಡೆಸಿತ್ತು.

ಇನ್ನು ಈ ಸಾಹಿತ್ಯವೆಂದರೆ ಮನಸ್ಸನ್ನು ಭ್ರಷ್ಟಗೊಳಿಸುವ ದಂತಕಥೆ, ವಿಪರ್ಯಸ್ತ ಇತಿಹಾಸ, ಧರ್ಮಾಂಧ ಪ್ರಚಾರ, ಇಲ್ಲವೇ ಅಗ್ಗದ ಕಥೆ-ಕಾದಂಬರಿಗಳಾಗಿರಲ್ಲಿಲ್ಲ; ಸಾಮಾಜಿಕ ಹಾಗೂ ಆರ್ಥಿಕ ತತ್ವಪ್ರಣಾಲಿಯ, ತತ್ವಜ್ಞಾನದ, ಟಾಲ್‌ಸ್ಟಾಯ್ ಗೋಗೊಲ್ ಮತ್ತು ಗೋರ್ಕಿ ಇವರುಗಳ ಪುಸ್ತಕಗಳು ಈ ಸಾಹಿತ್ಯದಲ್ಲಿ ಸಮಾವೇಶಗೊಂಡಿದ್ದವು...

ಸೀಮಾರೇಷೆಯ ಆಚೆಬದಿಯಲ್ಲಿದ್ದ ಹನ್ನೆರಡನೇ ಸೈನ್ಯದಳದ ಠಾಣೆಗೆ ನಾವು ಹೋಗಿದ್ದಾಗ ಹಸಿದು ಕಂಗಾಲಾಗಿದ್ದ ಸೈನಿಕರು ಕೆಸರು ತುಂಬಿದ ಕಂದಕಗಳಲ್ಲಿ ಅತ್ಯಂತ ನಿರಾಶ ಮನಃಸ್ಥಿತಿಯಲ್ಲಿ ಕುಳಿತವರಾಗಿ ನಮಗೆ ಕಂಡರು. ಅವರ ಮುಖಗಳೆಲ್ಲ ಒಣಗಿಹೋಗಿದ್ದವು, ಅವರ ಹರಿದ ಸಮವಸ್ತ್ರಗಳ ಮೂಲಕ ಅವರ ಶರೀರದ ಮೇಲಿನ ನೀಲಿ ನರಗಳು ಸ್ಪಷ್ಟವಾಗಿ ಕಾಣುತಿದ್ದವು.

ಅವರು ಉತ್ಸುಕತೆಯಿಂದ ನಮ್ಮನ್ನು ವಿಚಾರಿಸಿದರು, 'ನೀವು ಓದಲು ಏನಾದರೂ ತಂದಿರುವಿರಾ ?'

(ಜಾನ್ ರೀಡನ 'ಜಗವನ್ನೇ ಅಲ್ಲಾಡಿಸಿದ ಹತ್ತು ದಿನಗಳು' ಪುಸ್ತಕದಿಂದ)

ಇಷ್ಟೊಂದು ವಿರಾಟ ಪ್ರಮಾಣದಲ್ಲಿರದಿದ್ದರೂ ಕೂಡ ಒಂದು ಅತಿ ದೊಡ್ಡ ಜ್ಞಾನದ ಹಸಿವು ಇಂದು ನಮ್ಮೆಡೆಗೂ ಕಂಡುಬರುತ್ತಿದೆ. ದೂರ, ಸರ್ವ ದೂರ, ನಮ್ಮ ಕೈಗಳು ಅಲ್ಲಿಯವರೆಗೆ ತಲುಪಲಾರವು.

ನೀವು ನಮ್ಮ ಕೈಗಳಾಗಿರಿ.

ಇಂಥ ಜನ ಕಾಣಸಿಕ್ಕರೆ ಅವರನ್ನು ಐಕ್ಯರಂಗದ ಚಂದಾದಾರರನ್ನಾಗಿ ಮಾಡಿರಿ !

ಮೈಸೂರು

ಹೋಟೆಲ್ ಕಾರ್ಮಿಕರ ಪರಿಷ್ಕೃತ ವೇತನಕ್ಕೆ ಒತ್ತಾಯ

ಮೈಸೂರು ಜಿಲ್ಲಾ ಹೋಟೆಲ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ 15-3-82 ರಂದು ಸಭೆ ಸೇರಿದ ಹೋಟೆಲ್ ಕಾರ್ಮಿಕರು ಪರಿಷ್ಕೃತ ವೇತನವನ್ನು ಕೂಡಲೇ ಜಾರಿ ಪಡಿಸಬೇಕೆಂದು ಒತ್ತಾಯಿಸಿದರು.

ಈ ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದ ಬೆಂಗಳೂರು ಜಿಲ್ಲಾ ಹೋಟೆಲ್ ವರ್ಕರ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ| ಇ.ಕೆ.ಎನ್. ರಾಜನ್ ಅವರು ಮಾತನಾಡುತ್ತಾ ಈಗ ಪರಿಷ್ಕೃತವಾದ ವೇತನ ತುಂಬಾ ಕಡಿಮೆ ಇದೆಯೆಂದರು. ಸಧ್ಯ ಪರಿಷ್ಕೃತ ವೇತನ ಜಾರಿಯಾಗುವಂತೆ ಅವಿರತ ಹೋರಾಟ ನಡೆಸಬೇಕೆಂದರು. ಈ ಉದ್ದೇಶಕ್ಕಾಗಿ ರಾಜ್ಯ ಮಟ್ಟದ ಸಂಘಟನೆಗೆ ಮತ್ತು ಹೋರಾಟಕ್ಕೆ ಮುಂದಾಗಬೇಕಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ| ಮೋಹನ್‌ಕುಮಾರ್ ಅವರು ಮಾತನಾಡುತ್ತಾ, ಮೈಸೂರಿನಲ್ಲಿ ಹೋಟೆಲ್ ಕಾರ್ಮಿಕರು ನಡೆಸಿದ ಹೋರಾಟಗಳನ್ನು ವಿವರಿಸಿದರು. ಅವರು ಮುಂದುವರೆದು ಹೋಟೆಲ್ ಕಾರ್ಮಿಕರ ವೇತನ ಪರಿಷ್ಕರಿಸುವಲ್ಲಿ ಸರ್ಕಾರದ ವಿಳಂಬ ನೀತಿ ಮತ್ತು ಮಾಲೀಕಪರ ಧೋರಣೆಯನ್ನು ಕಟುವಾಗಿ ಟೀಕಿಸಿದರು.

ಆರಂಭದಲ್ಲಿ ಸಂಘದ ಕಾರ್ಯದರ್ಶಿ ಕೆ. ವಿ. ಪುಟ್ಟಪ್ಪ ಸ್ವಾಗತಿಸಿದರು. ಕೊನೆಯಲ್ಲಿ ಸಹ ಕಾರ್ಯದರ್ಶಿ ಕಪ್ಪುರಾಮು ವಂದಿಸಿದರು.

—

ಪರಿಸರ

● ಹದಿನೈದು ವರ್ಷಗಳ 'ಹಸಿರು ಕ್ರಾಂತಿ' ಯ ತರುವಾಯ ಕೂಡಾ ಪಂಜಾಬ್ ರಾಜ್ಯದಲ್ಲಿ ನಾಲ್ಕನೆ ಒಂದರಷ್ಟು ಸಣ್ಣ ರೈತರೂ ಮೂರನೇ ಒಂದರಷ್ಟು ಅಂಚಿನ ರೈತರೂ ದಾರಿದ್ರ್ಯ ರೇಖೆಗಿಂತ ಕೆಳಗಿದ್ದಾರೆ ಎಂದು ಜವಾಹರ್ ಲಾಲ್ ವಿಶ್ವವಿದ್ಯಾಲಯದ ಸಮೀಕ್ಷೆಯೊಂದರಿಂದ ತಿಳಿದು ಬಂದಿದೆ.

—ಹಿಂದೂಸ್ತಾನ್ ಟೈಮ್ಸ್

● ವಿಶ್ವಸಂಸ್ಥೆಯ ವರದಿಯೊಂದರ ಪ್ರಕಾರ ಮುಂಬಯಿಯ ಕಾಲಂಶ ಮಕ್ಕಳು ಆರು ಮತ್ತು ಒಂಬತ್ತು ವರ್ಷಗಳ ನಡುವೆ ಹಾಗೂ ಅರ್ಧದಷ್ಟು ಮಕ್ಕಳು ಹತ್ತು ಮತ್ತು ಹನ್ನೆರಡು ವರ್ಷಗಳ ನಡುವೆ ಉದ್ಯೋಗ ಮಾಡಲು ಆರಂಭಿಸುತ್ತಾರೆಂದು ತಿಳಿದು ಬಂದಿದೆ.

—ದಿ ಸ್ಟೇಟ್ಸ್‌ಮನ್

● 21 ಡಿಸೆಂಬರ್ 81ರಂದು ಉತ್ತರ ಪ್ರದೇಶದ ಅಜಮರ್‌ಘರ್ ಸ್ಟೇಷನ್ ಆಫೀಸರ್ ಜಾರ್ಖರಿಡೆರಾಯ್‌ರ ನೇತೃತ್ವದಲ್ಲಿನ ಪೋಲಿಸ್ ಪಡೆ, ಒಬ್ಬ ಸಿ.ಪಿ.ಐ. ಕಾರ್ಯಕರ್ತ ರಾಮಸ್ನೇಹಿ ರಾಯ್ ಅವರನ್ನು ಬಂಧಿಸಿ, ಬಾದರಾಂವ್ ಎಂಬಲ್ಲಿ ಗುಂಡಿಟ್ಟು ಕೊಂದಿದೆ. 1980ರ ಲೋಕಸಭಾ ಚುನಾವಣೆಗಳಲ್ಲಿ ಕಲ್ಪನಾಥ ರಾಯ್ ವಿರುದ್ಧ ಕೆಲಸ ಮಾಡಿದುದೆ ಇವರ ಕುರಿತು ಅಪರಾಧವಾಗಿತ್ತು. ಈ ಕೊಲೆ ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಡಕಾಯಿತರ ಮೇಲಿನ ಸಮರದಲ್ಲಿ ಸಂಭವಿಸಿದ "ಮುಖಾಮುಖಿ" ಸಾವುಗಳಲ್ಲಿ ಒಂದು ಮಾತ್ರ.

—ಸಂಡೇ. ಮಾ.21.

● ಅವರಿಗೆ (ಜಗತ್ತಿನ ಜನರಿಗೆ) ನಮ್ಮ ಪ್ರದೇಶದಲ್ಲಿ ಸೋವಿಯತ್ ಪ್ರಭಾವದ ಬಗ್ಗೆ ಸಹ ಅರಿವು ಮೂಡಿಸಬೇಕಾಗಿದೆ. ಖಲೀಸ್ಥಾನ ಮತ್ತು ಸಿಕ್ಖರು ಸೋವಿಯತ್ ವಿಸ್ತರಣೆಯ ವಿರುದ್ಧ ನಿಜವಾದ ರಕ್ಷೆಯಾಗಬಲ್ಲರು.

—ಜಗಜೀತ್ ಸಿಂಗ್ ಚವ್ಹಾನ್, ಖಲೀಸ್ತಾನ್ ನಾಯಕ "ಇಂಡಿಯಾ ಟುಡೇ" ಸಂದರ್ಶನದಲ್ಲಿ

● ತಂಬಾಕು ಬೆಳೆಗಾರರ ಹಿತರಕ್ಷಿಸಿ ಇಡೀ ತಂಬಾಕು ಉದ್ಯಮದ ಮೇಲೆ ಹಿಡಿತ ಇಟ್ಟುಕೊಳ್ಳಲೆಂದು ಸ್ಥಾಪಿಸಲಾದ ತಂಬಾಕು ಮಂಡಲಿ ಗುತ್ತೇದಾರಿ ಕಂಪೆನಿಗಳು ಹಾಗೂ ರಾಜಕೀಯದ ಉರುಳಿನಲ್ಲಿ ಸಿಕ್ಕಿ ನಿಷ್ಕ್ರಿಯವಾಗಿದೆ.

—ಪ್ರಜಾವಾಣಿ. ಮಾ. 15

● ನಾನು ಬಲಿಪಶು ಎಂದು ನನಗೆ ಅನ್ನಿಸತೊಡಗಿದೆ.

—ಮಹಾರಾಷ್ಟ್ರ ಮುಖ್ಯಮಂತ್ರಿ ಭೋಸಲೆ ಪ್ರಮಾಣ ಸ್ವೀಕರಿಸಿದ ನಂತರ.

● ಬ್ರಿಟನ್ನಿನ 35,000 ಸಾರಿಗೆ (ಬಸ್ ಮತ್ತು ಸಬ್‌ವೇ) ಕಾರ್ಮಿಕರು 1926ರ ಸಾರ್ವತ್ರಿಕ ಮುಷ್ಕರದ ನಂತರ ಪ್ರಥಮ ಎನ್ನಲಾದ, ಶೇಕಡಾ ನೂರು ಸಾಗಣೆ ದರ ಏರಿಕೆ ಮತ್ತು ಉದ್ಯೋಗ ಕಡಿತದ ವಿರುದ್ಧ, ಸಂಪೂರ್ಣ ಮುಷ್ಕರ ನಡೆಸಿದರು.

—ಯು.ಪಿ.ಐ. ಮಾ.-30.

ನಾಗರಕೊಯಿಲ್ ದುರ್ಘಟನೆಗೆ ಆರ್. ಎಸ್. ಎಸ್. ಕಾರಣ

(1ನೆಯ ಪುಟದಿಂದ)

ಹಿಂದೂ ಕೋಮುವಾದಿಗಳು ಕಂಡು ಬಂದರು.

ಮಾರ್ಚ್ 14 ಮತ್ತು 15 ರಂದು ನಾಗರಕೊಯಿಲ್ ನಿಂದ 15 ಕಿ. ಮಿ. ದೂರದಲ್ಲಿರುವ ಪಲ್ಲಥರೈ ಎಂಬ ಮೀನುಗಾರರ ಹಳ್ಳಿಯ ಮೇಲೆ RSS ನವರು ದಾಳಿ ನಡೆಸಿದರು. ನೂರಾರು ಗುಡಿಸಲು ಸುಡಲ್ಪಟ್ಟವು. ಹಳ್ಳಿಯ ಚರ್ಚ್ ಸಹ ದಾಳಿಗೀಡಾಗಿ ಜಖಂಗೊಂಡಿದೆ.

ಕೋವಲಂ ಎಂಬಲ್ಲಿ ಮತ್ತೆ ಗುಂಡಿನ ದಾಳಿ ನಡೆದು ಇಬ್ಬರು ನಿಧನ ಹೊಂದಿದರು.

ಮತೀಯ ಅಲ್ಪ ಸಂಖ್ಯಾತರರ ಮೇಲೆ ಕೆಂಡ ಕಾರುವ RSS ನಂಥ ವಿಚ್ಛಿದ್ರಕಾರಿ ಶಕ್ತಿಗಳನ್ನು ಹತ್ತಿಕ್ಕಲು ತಮಿಳುನಾಡು ಸರಕಾರ ಯೋಗ್ಯ ಕ್ರಮ ಕೈಗೊಳ್ಳದೇ ಅಪರಾಧ ವೆಸಗಿದೆ. ತಲೆ ತಲಾಂತರದಿಂದ ಸುಮಧುರ ಬಾಂಧವ್ಯದಿಂದ ಜೀವಿಸುತ್ತಿರುವ ಕೋಮುಗಳಲ್ಲಿ ವಿಷಬೀಜ ನೆಡಲು ಪ್ರಯತ್ನಿಸುವ ವಿಚ್ಛಿದ್ರಕಾರಿ ಶಕ್ತಿಗಳನ್ನು ಸೋಲಿಸಲು ದೇಶದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಅವಿರತ ಶ್ರಮಿಸುವುದೊಂದೇ ದಾರಿ.

—

ಸೈಕಲ್ ಜಾಥಾ

(1ನೆಯ ಪುಟದಿಂದ)

ಟಿತ್ತು, ದಾರಿಯಲ್ಲೇ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳ ಕಾರ್ಯಕರ್ತರ ತಂಡಗಳು ಈ ಜಾಥಾದೊಂದಿಗೆ ಸೇರಿದವು

ಸೈಕಲ್ ಜಾಥಾ ಪ್ರಾರಂಭವಾದ ಇನ್ನೊಂದು ಕೇಂದ್ರ ಧಾರವಾಡ. ಮಾರ್ಚ್ 21 ರಂದು ಬೆಂಗಳೂರಿನಿಂದ ಸುಮಾರು 510 ಕಿ. ಮೀ. ದೂರವಿರುವ ಧಾರವಾಡದಿಂದ ಪ್ರಾರಂಭವಾದ ಈ ಸೈಕಲ್ ಜಾಥಾ ತಂಡದಲ್ಲಿ ಚಿತ್ರದುರ್ಗ ಜಿಲ್ಲೆಯ ಕಾರ್ಯಕರ್ತರು ಜೊತೆಗೂಡಿದರು.

ಬೆಂಗಳೂರಿನಿಂದ ಸುಮಾರು 460 ಕಿ. ಮೀ. ದೂರವಿರುವ ಕುಂದಾಪುರದಿಂದ ಮಾರ್ಚಿ 21 ರಂದು ಕಾರ್ಯಕರ್ತರ ತಂಡವೊಂದು ಬೆಂಗಳೂರಿಗೆ ಹೊರಟಿತ್ತು. ಈ ತಂಡಕ್ಕೆ ಹಾಸನ ಜಿಲ್ಲೆಯ ಕಾರ್ಯಕರ್ತರು ಜೊತೆಗೂಡಿದರು.

ಬೆಂಗಳೂರಿನಿಂದ ಸುಮಾರು 260 ಕಿ. ಮೀ. ದೂರವಿರುವ ಗೋಣಿಕೊಪ್ಪಲು (ಕೊಡಗು), ಸೈಕಲ್ ಜಾಥಾ ಪ್ರಾರಂಭವಾದ ಇನ್ನೊಂದು ಕೇಂದ್ರ. ಈ ತಂಡದೊಟ್ಟಿಗೆ ಮೈಸೂರು ಜಿಲ್ಲೆಯ ಕಾರ್ಯಕರ್ತರು ಜೊತೆಗೂಡಿದರು. ಗೋಣಿಕೊಪ್ಪಲುನಿಂದ ಮಾರ್ಚಿ 23 ರಂದು ಜಾಥಾ ಆರಂಭಗೊಂಡಿತ್ತು.

ಮಾರ್ಚ್ 27 ರಂದು ಕೋಲಾರ ಜಿಲ್ಲೆಯ ಎರಡು ಕೇಂದ್ರಗಳಿಂದ ಜಾಥಾ ಬೆಂಗಳೂರಿನತ್ತ ಹೊರಟಿತ್ತು. ಕೆ. ಜಿ. ಎಫ್. (100 ಕಿ. ಮೀ.) ನಿಂದ ಪ್ರಾರಂಭವಾದ ತಂಡದಲ್ಲಿ ಬಂಗಾರುಪೇಟೆ, ಕೋಲಾರ, ಚಿಂತಾಮಣಿ ಈ ಸ್ಥಳಗಳಿಂದ ಕಾರ್ಯಕರ್ತರು ಜೊತೆಗೂಡಿದರು.

ಬಾಗೇಪಲ್ಲಿ (ಸುಮಾರು 100 ಕಿ. ಮೀ.) ನಿಂದ ಪ್ರಾರಂಭವಾದ ಜಾಥಾದಲ್ಲಿ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಕಾರ್ಯಕರ್ತರು ಜೊತೆಗೂಡಿದರು.

ಮಾರ್ಚಿ 28 ರಂದು ಈ ಮೇಲ್ಕಾಣಿಸಿದ ಎಲ್ಲ ಕೇಂದ್ರಗಳಿಂದ ಆಗಮಿಸಿದ ಸುಮಾರು 500 ಡಿ. ವೈ. ಎಫ್. ಐ. ಕಾರ್ಯಕರ್ತರು ಬೆಂಗಳೂರಿನ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಸಮಾವೇಶಗೊಂಡರು. ಬೆಂಗಳೂರು ಮತ್ತು ಸುತ್ತಮುತ್ತಲು ಪ್ರದೇಶದಿಂದ ಆಗಮಿಸಿದ ನೂರಾರು ಕಾರ್ಯಕರ್ತರು, ಸ್ವಯಂ ಸೇವಕರು ಜೊತೆಗೂಡಿ ರಾಜಭವನದತ್ತ ಮೆರವಣಿಗೆ ಕೊಂಡೊಯ್ಯಲಾಯಿತು.

ಹಲವಾರು ಕೇಂದ್ರಗಳಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ಸೈಕಲ್ ಜಾಥಾದ ಕಾರ್ಯಕರ್ತರು ತಾವು ಬರುವ ದಾರಿಯಲ್ಲಿನ ಎಲ್ಲ ಹಳ್ಳಿ ಪಟ್ಟಣಗಳಲ್ಲಿ ನಿರುದ್ಯೋಗ ಸಮಸ್ಯೆಯ ಬಗ್ಗೆ ಜನತೆಯ ಗಮನ ಸೆಳೆಯಲು ಪ್ರಯತ್ನಿಸಿದರು. ಬರುವ ದಾರಿಯಲ್ಲಿ ಅನೇಕ ಕಡೆ ಜಾಥಾ ಕಾರ್ಯಕರ್ತರಿಗೆ ಹೃತ್ಪೂರ್ವಕ ಸ್ವಾಗತ ನೀಡಲಾಯಿತು. ಡಿ.ವೈ. ಎಫ್.ಐ. ಘಟಕಗಳು ಇಲ್ಲದೆಡೆಯಲ್ಲೂ ಜನತೆ ಸ್ವಯಂ ಸ್ಫೂರ್ತಿಯಿಂದ ಬಳಲಿದ್ದ ಸೈಕಲ್ ಸವಾರರಿಗೆ ಉಪಚರಿಸಿದರು. ಬೆಂಗಳೂರಿನಲ್ಲಿ ಸೈಕಲ್ ಕಾರ್ಯಕ್ರಮದ ನಿಮಿತ್ತ ಸ್ವಾಗತ ಸಮಿತಿಯನ್ನು ರಚಿಸಲಾಗಿತ್ತು.

ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಮೆರವಣಿಗೆಯು ರಾಜಭವನದತ್ತ ತೆರಳಿತು, ನೂರಾರು ಮೈಲು ದೂರದಿಂದ ರಾಜಧಾನಿಗೆ ಆಗಮಿಸಿ ರಾಜ್ಯಪಾಲರಿಗೆ ಮನವಿ ಕೊಡಲು ಮೆರವಣಿಗೆಕಾರರು ಯತ್ನಿಸಿದರೆ ಪೋಲಿಸ್‌ರಿಂದ ಅದಕ್ಕೂ ತಡೆ. ರಾಜಭವನ ಇನ್ನೂ 1 ಕಿ.ಮೀ. ದೂರವಿರುವಾಗಲೇ ಮೆರವಣಿಗೆಯನ್ನು ತಡೆಯಲಾಯಿತು. ಕೊನೆಗೆ ಮುಂದಾಳುಗಳು ಮಾತ್ರ ತೆರಳಿ ರಾಜ್ಯಪಾಲರ ಕಾರ್ಯದರ್ಶಿಗೆ (ಬಹುಶಃ ರಾಜ್ಯಪಾಲರು ಸಾ ಯಿ ಬಾ ಬಾ ಇಲ್ಲವೇ ಯಾವುದಾದರೂ ಸ್ವಾಮಿಯ ದರ್ಶನಕ್ಕೆ ತೆರಳಿದ್ದರೆಂದು ಕಾಣುತ್ತೆ) ಮನವಿ ಸಲ್ಲಿಸಿದರು.

ನಂತರ ಸಾಯಂಕಾಲ 6 ಘಂಟೆಗೆ ನಗರದ ಚಿಕ್ಕಲಾಲ್‌ಬಾಗ್‌ನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಆರಂಭದಲ್ಲಿ ಸ್ವಾಗತಸಮಿತಿಯ ಅಧ್ಯಕ್ಷ, ಕಾರ್ಮಿಕ ಮುಂದಾಳು ಕಾಂ। ಆರ್. ಶ್ರೀನಿವಾಸ್ ಸ್ವಾಗತಿಸಿದರು.

ನಂತರ ಡಿ. ವೈ. ಎಫ್. ಐ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ। ಜಿ.ವಿ. ಶ್ರೀರಾಮರೆಡ್ಡಿಯವರು ಸೈಕಲ್ ಜಾಥಾ ಕಾರ್ಯಕ್ರಮದ ಉದ್ದೇಶವನ್ನು ವಿಶದಪಡಿಸಿದರು. ಕಾಂ। ರೆಡ್ಡಿ ಮಾತನಾಡುತ್ತಾ, 5 ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದರೂ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತ ಬಂದಿರುವುದನ್ನು ಅಂಕಿ ಅಂಶ ಸಮೇತ ವಿವರಿಸಿದರು. ಇದಕ್ಕೆ ಕಾರಣ ಸರ್ಕಾರ ಅನುಸರಿಸುತ್ತಿರುವ ಭೂಮಾಲಿಕ, ಬಂಡವಾಳಶಾಹಿ ಆರ್ಥಿಕ ಧೋರಣೆಯೇ ಎಂದರು. ನಿರುದ್ಯೋಗ ಸಮಸ್ಯೆ ಕೇವಲ ಬಂಡವಾಳಶಾಹಿ ಧೋರಣೆ ಅನುಸರಿಸುತ್ತಿರುವ ರಾಷ್ಟ್ರಗಳಿಗೆ ಮಾತ್ರ ಸೀಮಿತ ಎಂದ ಕಾಂ। ರೆಡ್ಡಿ, ಸಮಾಜವಾದಿ ರಾಷ್ಟ್ರಗಳು ಈ ಸಮಸ್ಯೆಯನ್ನು ಸಂಪೂರ್ಣವಾಗಿ ತೊಡೆದು ಹಾಕಿವೆ ಎಂದರು. ಇತ್ತೀಚೆಗೆ ತಾನೇ ಸರ್ಕಾರದ ನಾನಾ ಇಲಾಖೆಗಳಲ್ಲಿ ಸುಮಾರು 42,000 ಹುದ್ದೆಗಳು ಖಾಲಿಯಾಗಿ ಉಳಿದಿವೆ ಎಂದು ಮುಖ್ಯಮಂತ್ರಿ ಗುಂಡೂರಾಯರು ತಿಳಿಸಿದ್ದನ್ನು ಪ್ರಸ್ತಾಪಿಸಿದ ರೆಡ್ಡಿಯವರು, ಅನೇಕ ವಾಗ್ದಾನಗಳ ನಂತರವೂ 14,000 ಸ್ವೈಫಂಡರಿಗಳ ಭವಿಷ್ಯ ನಿರ್ಧಾರವಾಗದಿರುವುದು ಹಾಸ್ಯಾಸ್ಪದ ಎಂದರು.

ನಂತರ ಸಭೆಯನ್ನುದ್ದೇಶಿಸಿ ಡಿ.ವೈ. ಎಫ್. ಐ. ರಾಜ್ಯಘಟಕದ ಅಧ್ಯಕ್ಷ ಕಾಂ। ವಿ.ಜಿ. ಕಮ್ಮಾರ ಅವರು ಮಾತನಾಡುತ್ತಾ, ಸಮಸ್ಯೆಯ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಸಾಮರ್ಥ್ಯವಿಲ್ಲದಿದ್ದರೆ ನಿರುದ್ಯೋಗ ಭತ್ಯೆಯನ್ನಾದರೂ ಕೊಡಿ ಎಂದು ಸರ್ಕಾರವನ್ನು ಒತ್ತಾಯಿಸಿದರು ದುಡಿಯುವ ಹಕ್ಕನ್ನು ಮೂಲಭೂತ ಹಕ್ಕೆಂದು ಪರಿಗಣಿಸಬೇಕೆಂದು ಕಾಂ। ಕಮ್ಮಾರ ಆಗ್ರಹಪಡಿಸಿದರು.

ನಂತರ ಸಭೆಯನ್ನುದ್ದೇಶಿಸಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಿ. ವೈ. ಎಫ್. ಐ. ಅಖಿಲಭಾರತ ಅಧ್ಯಕ್ಷರೂ, ಸಂಸತ್ ಸದಸ್ಯರೂ ಆಗಿರುವ ಕಾಂ। ಹನ್ನನ್ ಮುಲ್ಲಾ ಮಾತನಾಡಿದರು. ಕಾಂ। ಹನ್ನನ್ ಮುಲ್ಲಾ ಮಾತನಾಡುತ್ತಾ 82ನೇ ವರ್ಷವನ್ನು 'ಉತ್ಪಾದನಾ ವರ್ಷ' ವನ್ನಾಗಿ ಆಚರಿಸಲು ಕರೆ ನೀಡಿದ್ದನ್ನು ಪ್ರಸ್ತಾಪಿಸಿ, ಲಕ್ಷಾಂತರ ಜನತೆ ಉದ್ಯೋಗವಿಲ್ಲದೇ ಬಳಲುತ್ತಿರುವಾಗ ಪ್ರಧಾನಿ ನೀಡಿರುವ ಈ ಕರೆ ಹಾಸ್ಯಾಸ್ಪದ ಎಂದರು.

ನಿರುದ್ಯೋಗ ವಿರೋಧಿ ದಿನಾಚರಣೆಯನ್ನು ರಾಷ್ಟ್ರದಾದ್ಯಂತ ಆಚರಿಸುತ್ತಿರುವುದನ್ನು ಪ್ರಸ್ತಾಪಿಸಿ ಕಾಂ। ಹನ್ನನ್ ಪ್ರಜಾ ಸತ್ತಾತ್ಮಕ ಯುವಜನ ಸಂಘಟನೆಯು ರಾಷ್ಟ್ರೀಯ ಸ್ವಾಯತ್ತತೆ, ಐಕ್ಯಗಳಿಗೋಸ್ಕರ ಶ್ರಮಿಸುತ್ತಿದೆ ಎಂದರು. ವಿಚ್ಛಿದ್ರಕಾರಿ ಶಕ್ತಿಗಳು, ಮಣ್ಣಿನ ಮಕ್ಕಳ ವಾದ ಮುಂತಾದ ಸಂಕುಚಿತ ಭಾವನೆಗಳ ವಿರುದ್ಧ ಯುವಜನತೆ ಅವಿಶ್ರಾಂತವಾಗಿ ಶ್ರಮಿಸಬೇಕೆಂದು ಕಾಂ। ಹನ್ನನ್ ಮನವಿ ಮಾಡಿದರು.

ಕೊನೆಯಲ್ಲಿ ಸ್ವಾಗತ ಸಮಿತಿಯ ಕಾರ್ಯದರ್ಶಿ ಮತ್ತು ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ। ಎಸ್. ಶಿವರಾಂ ವಂದಿಸಿದರು. ಬೆಂಗಳೂರಿನಲ್ಲಿ ಅರಸೋಜಿರಾವ್ ಛತ್ರದಲ್ಲಿ ದೂರದಿಂದ ಆಗಮಿಸಿದ್ದ ಸೈಕಲ್ ಜಾಥಾ ಕಾರ್ಯಕರ್ತರಿಗೆ ತಂಗಲು ವ್ಯವಸ್ಥೆ ಮಾಡಲಾಗಿತ್ತು.

—

ಬೀಡಿ ಮಜೂರರ ಸಮ್ಮೇಳನ

21-3-82 ರಂದು ಮಂಜೇಶ್ವರ ವಿಭಾಗದ ಬೀಡಿ ಮಜೂರರ ಸಮ್ಮೇಳನವು ಉಪ್ಪಳದಲ್ಲಿ ಜರುಗಿತು. ಮಂಜೇಶ್ವರ ವಿಭಾಗಕ್ಕೆ ಸಂಬಂಧಪಟ್ಟ ಎಂಟು ಪಂಚಾಯತ್‌ಗಳ ಬೀಡಿ ಮಜೂರರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸಮ್ಮೇಳನದ ಅಧ್ಯಕ್ಷತೆಯನ್ನು ದ. ಕ ಜಿಲ್ಲಾ ಬೀಡಿ ಫೆಡರೇಷನ್ನಿನ ಕಾರ್ಯದರ್ಶಿ ಕಾಂ॥ ಯು. ಬಿ. ಲೋಕಯ್ಯ ಅವರು ವಹಿಸಿದ್ದರು. ಅಖಿಲ ಭಾರತ ಬೀಡಿ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಕಾಂ॥ ಸಿ. ಕಣ್ಣನ್ ಸಮ್ಮೇಳನವನ್ನು ಉದ್ಘಾಟಿಸಿದರು. ಸಮ್ಮೇಳನದಲ್ಲಿ ಸ್ಥಳೀಯ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಯಿತು.

ಸಮ್ಮೇಳನವನ್ನುದ್ದೇಶಿಸಿ ಕಾಸರಗೋಡ ತಾಲ್ಲೂಕು ಸಿಐಟಿಯು ಸೆಕ್ರೆಟರಿ ಕಾಂ॥ ಭಾಸ್ಕರನ್ ಮಾತನಾಡಿದರು. ಕಾಂ॥ ಬಿ. ಎಂ. ರಾಮಯ್ಯ ಅವರು ಸಂಚಾಲಕರಾಗಿರುವ ಒಂದು ಸಮಿತಿಯನ್ನು ರಚಿಸಲಾಯಿತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K V. Temple Street ,Sultanpet, Bangalore 560 053. Phone-24154. Printed at Ravee Traders, No. 8/1, J. M Lane, Balepet Cross, Bangalore-560 053. EDITOR : M K. BHAT.